ಡಿಸೆಂಬರ್ – 2012

# ಸ್ವಾಭಿಮಾನಿ ಸಹಕಾರಿ

ಅಂತರರಾಷ್ಟ್ರೀಯ
ಸಹಕಾರಿಗಳ ವರ್ಷ – 2012

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸಂಪುಟ 10 * ಸಂಚಿಕೆ 12 * ಸೌಹಾರ್ದ ಸಹಕಾರಿ ಚಳುವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ * ವಾರ್ಷಿಕ ಚಂದಾ 100/- * ಬೆಲೆ ರೂ. 12/- * ಪುಟಗಳು 20

## ನಾಡಿನ ಜನತೆಗೆ ಕನಕ ಜಯಂತಿ ಶುಭಾಶಯಗಳು

## ಜನವರಿ 1 ಸೌಹಾರ್ದ ಸಹಕಾರಿ ದಿನ

ಸಹಕಾರಿಗಳು ಸಂಭ್ರಮದಿಂದ ಆಚರಿಸಿ

ಪರಮಪದದೊಳಗೆ ವಿಷಧರನತಲ್ಪದಲಿ ನೀ
ಸಿರಿಸಹಿತ ಕ್ಷೀರವಾರಿಧಿಯೊಳಿರಲು
ಕರಿರಾಜ ಕಷ್ಟದಲಿ
ಆದಿ ಮೂಲ ಎಂದು
ಕರೆಯಾಲಾಕ್ಷಣ ಬಂದು
ಒದಗಿದೆಯೋ
ನರಹರಿಯೇ ಬಾಗಿಲನು ತೆರೆದು...






ಸೌಹಾರ್ದ ಸಹಕಾರಿಗಳ ಸಂಖ್ಯೆ : 2285 - 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ - 480



# ಸಹಕಾರಿ ಸಂಸ್ಥೆಗಳಿಂದ ಉತ್ತಮ ಸಮಾಜ ನಿರ್ಮಾಣ

ಸಮಾನ ಮನಸ್ಕರು ತಮ್ಮ ಆರ್ಥಿಕ ಅಭಿವೃದ್ಧಿಯ ಸಾಮಾನ್ಯ ಗುರಿ ಸಾಧನೆಗಾಗಿ ಸಮಾನತೆಯ ತಳಹದಿಯ ಮೇಲೆ ಕಟ್ಟಿಕೊಂಡಿರುವ ಸಂಸ್ಥೆಯೇ ಸಹಕಾರಿ ಸಂಘವೆಂದು ಸಾಮಾನ್ಯ ಅರ್ಥ. ಈ ಆಧಾರದ ಮೇಲೆ ಭಾರತದಲ್ಲಿ ಕಳೆದ ಒಂದು ಶತಮಾನದಿಂದ ಸಹಕಾರಿ ಚಳುವಳಿ ಪ್ರಾರಂಭವಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಕೃಷಿ ಅಭಿವೃದ್ಧಿಗಾಗಿ ಹಾಗೂ ಕೃಷಿಗೆ ಪೂರಕ ಕಸಬುಗಳ ಅಭಿವೃದ್ಧಿಗಾಗಿ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿವೆ. ಅದರಂತೆ ಪಟ್ಟಣ ಪ್ರದೇಶಗಳಲ್ಲಿ ವಿವಿಧ ವರ್ಗಗಳ ಜನರು ತಮ್ಮ ಸಮುದಾಯದ ಅಭಿವೃದ್ಧಿಗೆ ಹಲವು ವಿಧವಾದ ಸಹಕಾರಿ ಸಂಸ್ಥೆಗಳನ್ನು ಹುಟ್ಟು ಹಾಕಿದ್ದಾರೆ. ಇದುವರೆಗೆ 5.95 ಲಕ್ಷಕ್ಕೂ ಮೀರಿ ಸಹಕಾರಿ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿದ್ದು 24.92 ಕೋಟಿಗೂ ಮೀರಿ ಸದಸ್ಯ ಬಳಗವನ್ನು ಹೊಂದಿದೆ. ಈ ಕ್ಷೇತ್ರದಲ್ಲಿ 33.71 ಲಕ್ಷ ಕೋಟಿ ರೂ.ಗಳ ಪಾಲು ಬಂಡವಾಳ 34.85 ಲಕ್ಷ ಕೋಟಿ ರೂ.ಗಳ ಠೇವಣಿ 59.74 ಲಕ್ಷ ಕೋಟಿ ದುಡಿಯುವ ಬಂಡವಾಳವಿರುವ ಜಗತ್ತಿನ ಅತ್ಯಂತ ದೊಡ್ಡ ಸಹಕಾರಿ ಚಳುವಳಿಯಾಗಿ ಹೊರ ಹೊಮ್ಮಿದೆ.

ರಾಷ್ಟ್ರದ ಅರ್ಥ ವ್ಯವಸ್ಥೆಯಲ್ಲಿ ರಸಗೊಬ್ಬರ ಉತ್ಪಾದನೆಯಲ್ಲಿ ಶೇ. 26.3, ಗೋಧಿ ಉತ್ಪಾದನೆಯಲ್ಲಿ ಶೇ. 33.5, ಪಶು ಆಹಾರ ಪೂರೈಕೆಯಲ್ಲಿ ಶೇ.50.00 ಹಾಲು ಉತ್ಪಾದನೆ ಹಾಗೂ ಮಾರಾಟದಲ್ಲಿ ಶೇ. 18.24, ಕೈಮಗ್ಗದ ವಿಭಾಗದಲ್ಲಿ ಶೇ. 54 ಭಾಗವನ್ನು ಸಹಕಾರಿ ಕ್ಷೇತ್ರ ನಿರ್ವಹಿಸುತ್ತಿದೆ. ಈ ಕ್ಷೇತ್ರದಲ್ಲಿ 1.22 ಮಿಲಿಯನ್ ನೇರ ಉದ್ಯೋಗ ಹಾಗೂ 15.47 ಮಿಲಿಯನ್ ಜನರಿಗೆ ಸ್ವಯಂ ಉದ್ಯೋಗ ಒದಗಿಸಿದ ಕೀರ್ತಿ ಸಹಕಾರಿ ಕ್ಷೇತ್ರದ್ದಾಗಿದೆ.

ರಾಷ್ಟ್ರಮಟ್ಟದಲ್ಲಿ, ರಾಜ್ಯ ಮಟ್ಟದಲ್ಲಿ ಇಫ್ಕೋ, ಕ್ರೀಭ್ಕೋ, ಅಮೂಲ್, ನೇಫೇಡ್, ಕ್ಯಾಮ್ಕ್ಕೋ, ಮ್ಯಾಮ್ಕ್ಕೋ ಪಟ್ಟಣ ಸಹಕಾರ ಬ್ಯಾಂಕುಗಳು ಕ್ರೆಡಿಟ್ ಸಹಕಾರಿ ಸಂಸ್ಥೆಗಳು ಇತ್ಯಾದಿ ಸಹಕಾರಿ ಸಂಸ್ಥೆಗಳು ಉತ್ತಮ ಆರ್ಥಿಕ ಸಂಘಟನೆಗಳಾಗಿ ಕಾರ್ಯನಿರ್ವಹಿಸುವ ಮೂಲಕ ಈ ದೇಶದ ಅರ್ಥ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿ ಹೊರಹೊಮ್ಮಿದೆ. ಸಹಕಾರ ಕ್ಷೇತ್ರ ಈ ದೇಶದ ಜನರ ಜೀವನ ಪದ್ಧತಿಯಾಗಿ ಬೆಳೆದಿದೆ ಉತ್ತಮ ಸಹಕಾರಿ ಸಮಾಜ ನಿರ್ಮಾಣಕ್ಕೆ ಸಾಕ್ಷಿಯಾಗಿವೆ.

ಸಮಾಜದ ಕನಿಷ್ಟ ವ್ಯಕ್ತಿಗೂ ಈ ಸಂಸ್ಥೆಗಳಿಂದ ಪ್ರಯೋಜನವಾಗಬೇಕೆಂಬುದು ಸರಕಾರಿಗಳ ಅಪೇಕ್ಷೆ. ಅದಕ್ಕಾಗಿಯೇ ಆಗಿಂದಾಗ್ಗೆ ಪ್ರಗತಿ ಹಾಗೂ ಕಾರ್ಯಚಟುವಟಿಕೆಗಳ ಅಧ್ಯಯನ ಮಾಡುವುದಲ್ಲದೆ, ಸಹಕಾರಿ ಕ್ಷೇತ್ರದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದೆ ಹಾಗೂ ಎಲ್ಲ ವಿಧವಾದ ನೆರವು ನೀಡುತ್ತ ಬಂದಿದೆ. ಸ್ವಾತಂತ್ರ್ಯಾನಂತರ ಅನುಷ್ಠಾನಗೊಂಡ ಎಲ್ಲ ಪಂಚವಾರ್ಷಿಕ ಯೋಜನೆಗಳಲ್ಲಿ ಕೃಷಿ, ಗ್ರಾಮೀಣ ಅಭಿವೃದ್ಧಿ, ನೀರಾವರಿ, ಕೈಗಾರಿಕೆ, ಸಣ್ಣ ಉದ್ದಿಮೆಗಳು, ಗುಡಿಕೈಗಾರಿಕೆಗಳು, ಹೈನುಗಾರಿಕೆ, ಮುಂತಾದ ಯೋಜನೆಗಳನ್ನು ಸಹಕಾರಿ ಕ್ಷೇತ್ರದ ಮೂಲಕವೇ ಜಾರಿಮಾಡುವುದರ ಮೂಲಕ ಸಹಕಾರ ಸಂಸ್ಥೆಗಳು ಬಡವರ ಆರ್ಥಿಕ ಅಭಿವೃದ್ಧಿಯ ಸಾಧನವಾಗಿ ಹೊರಹೊಮ್ಮಿದೆ. ಆದ್ದರಿಂದಲೇ ಗಾಂಧೀಜಿಯವರು 1947ರಲ್ಲಿ ನಮ್ಮ ದೇಶಕ್ಕೆ ರಾಜಕೀಯ ಸ್ವಾತಂತ್ರ್ಯ ಬಂದಿದೆ, ಆರ್ಥಿಕ ಸ್ವಾತಂತ್ರ್ಯವನ್ನು ಗಳಿಸಲು ಸಹಕಾರ ಕ್ಷೇತ್ರವೊಂದೇ ಪ್ರಮುಖ ಸಾಧನ ಅದನ್ನು ಸದೃಢಗೊಳಿಸಲೇಬೇಕು ಎಂದಿದ್ದರು.

ಸಹಕಾರಿ ಕ್ಷೇತ್ರದ ಈ ಸಾಧನೆಯನ್ನು ಅವಲೋಕಿಸಿದ ವಿಶ್ವಸಂಸ್ಥೆಯವರು ಸಹಕಾರಿ ಸಂಸ್ಥೆಗಳು ಉತ್ತಮ ಸಮಾಜ ನಿರ್ಮಾಣ ಮಾಡುತ್ತವೆ ಎಂಬುವ ಘೋಷಣೆ ಹಾಗೂ ಅದೇ ನಿಟ್ಟಿನಲ್ಲಿ ಕಾರ್ಯಾಚರಣೆ ಮಾಡುವುದರೊಂದಿಗೆ ಸಹಕಾರಿ ಕ್ಷೇತ್ರಕ್ಕೆ ಹೊಸ ಕಾಯಕಲ್ಪವನ್ನು ನೀಡುವಲ್ಲಿ ಸಹಕಾರಿಗಳಲ್ಲಿ ಹೊಸ ಉತ್ಸಾಹ ತುಂಬುವಲ್ಲಿ ಪ್ರಯತ್ನ ಮಾಡಿರುವುದು ಉತ್ತಮ ಸಮಾಜ ನಿರ್ಮಾಣ ಸಾಧ್ಯ ಎಂಬುದನ್ನು ರುಜುವಾತುಗೊಳಿಸಿದೆ.

**ಗಾಂಧೀಜಿಯವರು 1947ರಲ್ಲಿ ನಮ್ಮ ದೇಶಕ್ಕೆ ರಾಜಕೀಯ ಸ್ವಾತಂತ್ರ್ಯ ಬಂದಿದೆ. ಆರ್ಥಿಕ ಸ್ವಾತಂತ್ರ್ಯವನ್ನು ಗಳಿಸಲು ಸಹಕಾರ ಕ್ಷೇತ್ರವೊಂದೇ ಪ್ರಮುಖ ಸಾಧನ ಅದನ್ನು ಸದೃಢಗೊಳಿಸಲೇ ಬೇಕು ಎಂದಿದ್ದರು.**

– ಎಸ್.ಆರ್.ಸತೀಶಚಂದ್ರ

## ದಕ್ಷಿಣ ಕನ್ನಡ ಜಿಲ್ಲೆಯ ಗುರುವಾಯನಕೆರೆಯಲ್ಲಿ

# ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ವ್ಯಕ್ತಿತ್ವ ವಿಕಸನ ತರಬೇತಿ




ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾ ಮಂಡಳ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಸಹಕಾರ ಯೂನಿಯನ್ ಮಂಗಳೂರು ಸಹಯೋಗದೊಂದಿಗೆ ರಾಜ್ಯ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 8 ನೇ ತಂಡದ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮವು ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕಿನ ಗುರುವಾಯನಕೆರೆಯ ದಿನಾಂಕ.01.12.2012 ರಂದು ಪ್ರಾರಂಭವಾಯಿತು. ಈ ಕಾರ್ಯಕ್ರಮವನ್ನು ಶ್ರೀ ಧವಳ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎಂ ರವೀಶ್‌ಕುಮಾರ್‌ರವರು ಉದ್ಘಾಟಿಸಿ,ಸಮಾಜದ ಯಾವುದೇ ವ್ಯವಸ್ಥೆಯನ್ನು ನಾವು ಅಧ್ಯಯನ ಮಾಡಿದಾಗ ಸಹಕಾರ ಕ್ಷೇತ್ರದ ಬಲವಾದ ಸದೃಢವಾದ ವ್ಯವಸ್ಥೆಬೇರೊಂದಿಲ್ಲ. ಸಮಾಜದ ಎಲ್ಲಾ ವರ್ಗದ ಜನರನ್ನು ಸ್ಪಂದಿಸುವ ಕ್ಷೇತ್ರ ಇದಾಗಿದೆ. ಸಹಕರ ಕ್ಷೇತ್ರದ ಮೂಲಕ ಸಂಪನ್ಮೂಲಗಳ ಸಂಗ್ರಹ ಹಾಗೂ ಸದುಪಯೋಗದ ಬಗ್ಗೆ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬಹುದಾಗಿದೆ ಎಂದು ದಿ. ಡಾ॥ ಕುರಿಯನ್‌ರವರ ಉದಾಹರಣೆಯೊಂದಿಗೆ ತಿಳಿಸಿದರು. ಶ್ರೀ ಧವಳ ಕಾಲೇಜಿನಲ್ಲಿ ಸಹಕಾರದ ಬಗ್ಗೆ ಪದವಿಯಲ್ಲಿ ಒಂದು ವಿಷಯವನ್ನಾಗಿ ಅಳವಡಿಸಿ ಬೋಧಿಸಲಾಗುತ್ತಿದೆ. ಎಂದು ತಿಳಿಸಿದರು.

ಉದ್ಘಾಟನಾ ಸಮಾರಂಭದ ಕಾರ್ಯಕ್ರಮದ ಆಧ್ಯಕ್ಷತೆಯನ್ನು ವಹಿಸಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್. ಆರ್. ಸತೀಶ್ಚಂದ್ರರವರು ರಾಜ್ಯದ ಸೌಹರ್ದ ಸಹಕಾರಿಯ ಕ್ಷೇತ್ರದ ಬೆಳವಣಿಗೆ ವೇಗ ದಿನೇ ದಿನೇ ಹೆಚ್ಚುತಲಿದೆ. ಸೌಹಾರ್ದ ಸಹಕಾರಿ ಸಿಬ್ಬಂದಿಯವರಿಗೆ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಸಿಬ್ಬಂದಿಯವರ ವ್ಯಕ್ತಿತ್ವ ಅರಳಿಸುವಂತಹ ವಿಕಸಿಸುವಂತಹ ವಿಶೇಷ ಕಾರ್ಯಕ್ರಮವನ್ನು ಕಳೆದ 4 ವರ್ಷದಿಂದ ಹಮ್ಮಿಕೊಳ್ಳುತಾ ಬಂದಿದೆ. ಪ್ರತಿ 6 ತಿಂಗಳಿಗೊಂದು ಬಾರಿಯಂತೆ ಹಮ್ಮಿಕೊಳ್ಳುತಾ ಬಂದಿದ್ದು ಇದೊಂದು ವಿಭಿನ್ನರೀತಿಯ ವಿಶೇಷ ಕಾರ್ಯಕ್ರಮ ಈ ತರಬೇತಿ ಪಡೆದಂತಹ ಸಿಬ್ಬಂದಿಯವರು ಸಹಕಾರಿ ಕ್ಷೇತ್ರದ ಸೇನಾನಿಗಳಾಗಿ ಸಂಬಂಧಿಸಿದ ಸಹಕಾರಿಯ ಜವಾಬ್ದಾರಿಯುತ ಅಧಿಕಾರಿಯಾಗಿ ಹಾಗೂ ಸಹಕಾರಿಯ ಆಸ್ತಿಯಾಗಿ ಪರಿವರ್ತಿಸುವ ಕಾರ್ಯಕ್ರಮ ಇದಾಗಿದೆ ಎಂದು ತಿಳಿಸಿದರು. ಇದುವರೆಗಿನ ಎಲ್ಲಾ ಕಾರ್ಯ ಕ್ರಮದಲ್ಲಿ ಭಾಗವಹಿಸಿದ ಶಿಬಿರಾರ್ಥಿಗಳು ಅವರವರ ಸಹಕಾರಿಗಳಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗಿದೆ ಎಂದು ಸದರಿ ಸಹಕಾರಿಗಳ ಪದಾಧಿಕಾರಿಗಳು ಅಭಿಪ್ರಾಯವಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಹಿರಿಯ ಸಹಕಾರಿ ಹಾಗೂ ರಬ್ಬರ್ ಸಹಕಾರಿ ಸಂಘದ ಅಧ್ಯಕ್ಷರಾದ ಶ್ರೀ ಶ್ರೀಧರ ಬೀಡೇಯವರು ಮಾತನಾಡಿ ಇದೊಂದು ಅದ್ಬುತ ಕಾರ್ಯಕ್ಷೇತ್ರ ಹಾಗೂ ಬೆಳೆಗಾರರಿಗೆ ಉತ್ತಮವಾದ ಮಾರುಕಟ್ಟೆಯಲ್ಲಿ ಹಾಗೂ ಸೇವೆಯನ್ನು ಒದಗಿಸುವ ಕ್ಷೇತ್ರವಾಗಿದೆ. ಎಂದು ಹೇಳುತಾ ತಮ್ಮ ರಬ್ಬರ್ ಸಹಕಾರಿ ಸಂಘದ ಕಾರ್ಯಚಟುವಟಿಕೆಗಳ ಉದಾಹರಣೆಯೊಂದಿಗೆ ಹೇಳಿದರು ಹಾಗೂ ಇದೇ ಸಂದರ್ಭದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಹಿರಿಯ ಸಹಕಾರಿಗಳಾದ ದಿವಂಗತ ಮೊರಹಳ್ಳಿ ಶಿವರಾಯರು, ದಿವಂಗತ ಬಂಟ್ವಾಳ ನಾರಾಯಣ ನಾಯ್ಕ್‌ರವರು ಮುಂತಾದವರು ದಕ್ಷಿಣ ಕನ್ನಡ ಜಿಲ್ಲೆ ಉತ್ತಮ ಸಹಕರಿ ಕ್ಷೇತ್ರದ ಜಿಲ್ಲೆ ಎಂಬುದಕ್ಕೆ ಅವರಲ್ಲಿ ಕಾರಣರು ಎಂದು ತಿಳಿಸುತಾ ಸೌಹಾರ್ದ ಸಹಕಾರ ಕ್ಷೇತ್ರದ ಬೆಳವಣಿಗೆ ಉತ್ತಮವಾಗಿದೆ ಎಂದು ತಿಳಿಸಿದರು.

ನಾಗರೀಕ ಸೇವಾ ಟ್ರಸ್ಟ್‌ನಾ ಅಧ್ಯಕ್ಷರಾದ ಶ್ರೀ ಸೋಮನಾಥ ನಾಯ್ಕ್‌ರವರು ಮಾತನಾಡಿ ಸಹಕಾರಿ ಕ್ಷೇತ್ರ ದೀನದಲಿತರ ಆರ್ಥಿಕ ಮತ್ತು ಸಾಮಜಿಕ ಅಭಿವೃದ್ಧಯ ಸಾಧನವಾಗಿದೆ. ಪ್ರತಿಯೊಂದು ಸಂಸ್ಥೆಯ

16ನೇ ಪುಟಕ್ಕೆ...

# ಗದಗಿನ ಕಾಟನ್ ಸೇಲ್ಸ್ ಸೊಸಾಯಿಟಿ ಆವರಣದಲ್ಲಿ 59ನೇ ಅಖಿಲ ಭಾರತ ಸಹಕಾರ ಸಪ್ತಾಹ : ಅದ್ದೂರಿ ಕಾರ್ಯಕ್ರಮದಲ್ಲಿ ಹಲವು ಸಾಧಕರಿಗೆ ಸನ್ಮಾನ



**ಗದಗ್ ಸಹಕಾರ ಕ್ಷೇತ್ರದ ಕಾಶಿ ಮತ್ತು ಪುಣ್ಯಭೂಮಿ ದೇಶದ ಪ್ರಪ್ರಥಮ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಸೇರಿದಂತೆ ಹಲವು ಸಹಕಾರ ಸಂಸ್ಥೆಗಳ ಸ್ಥಾಪನೆಗೆ ಈ ನೆಲ ಹಾಗೂ ಈ ನೆಲದ ಸಹಕಾರಿಗಳು ಕಾರಣರಾಗಿದ್ದಾರೆ.**

59ನೇ ಅಖಿಲ ಭಾರತ ಸಹಕಾರ ಸಪ್ತಾಹದ ಅಂಗವಾಗಿ ದಿನಾಂಕ 17-11-2012 ರಂದು ಶುದ್ಧ ಕುಡಿಯುವ ನೀರಿನ ಪೂರೈಕೆ ಒಳಗೊಂಡಂತೆ ಹೊಸ ಕ್ಷೇತ್ರಗಳಲ್ಲಿ ಸಹಕಾರ ಸಂಸ್ಥೆಗಳು ತೊಡಗಿಸಿಕೊಳ್ಳಲು ಪ್ರೋತ್ಸಾಹಿಸುವ ಸೇವಾ ದಿನವನ್ನು ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ, ಧಾರವಾಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್, ಗದಗ ಜಿಲ್ಲಾ ಸಹಕಾರ ಯೂನಿಯನ್ ಹಾಗೂ ಸ್ಥಳೀಯ ಎಲ್ಲ ಸಹಕಾರಿ/ಹಾಗೂ ಸೌಹಾರ್ದ ಸಹಕಾರಿ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಗದಗಿನ ಕಾಟನ್ ಸೇಲ್ಸ್ ಸೊಸೈಟಿಯ ಆವರಣದಲ್ಲಿ ಕೆ.ಹೆಚ್.ಪಾಟೀಲರ ಹೆಸರಿನ ಭವ್ಯ ಸಭಾಮಂಟಪದಲ್ಲಿ ಅದ್ದೂರಿಯಾಗಿ ಜರುಗಿತು.

ಸಪ್ತಾಹದಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದ ಗಣ್ಯರನ್ನು, ಸಹಕಾರಿ ಕ್ಷೇತ್ರದ ಸಾಧಕರನ್ನು ಭವ್ಯವಾದ ಮೆರವಣಿಗೆಯಲ್ಲಿ ಸಭಾಮಂಟಪಕ್ಕೆ ಕರೆತರಲಾಯಿತು. ಹಿರಿಯ ಸಹಕಾರಿ ಶ್ರೀ ಡಿ.ಆರ್.ಪಾಟೀಲರವರು ಸಹಕಾರಿ ಧ್ವಜಾರೋಹಣ ಮಾಡಿದರು. ಮಹಾಮಂಡಳದ ಅಧ್ಯಕ್ಷ ಶ್ರೀ ಜಿ.ಟಿ.ದೇವೆಗೌಡರವರು ಶ್ರೀ. ಕೆ.ಹೆಚ್.ಪಾಟೀಲರವರ ಪುತ್ಥಳಿಗೆ ಮಾಲಾರ್ಪಣೆ ಮಾಡಿದನಂತರ ಗಣ್ಯರನ್ನು ಹಾಗೂ ಸನ್ಮಾನಿತರನ್ನು ಸಹಕಾರಿ ಪಿತಾಮಹ ದಿ.ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲ ಮಹಾದ್ವಾರದ ಮೂಲಕ ವೇದಿಕೆಗೆ ಕರೆತರಲಾಯಿತು.

**ಸಹಕಾರ ಕ್ಷೇತ್ರಕ್ಕೆ ಪ್ರೋತ್ಸಾಹ ಅಗತ್ಯ. ಹೆಚ್.ಕೆ.ಪಾಟೀಲ್ :**

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಅಧ್ಯಕ್ಷ ಶ್ರೀ ಹೆಚ್.ಕೆ. ಪಾಟೀಲರು ಮಾತನಾಡಿ ಇದು ಸಹಕಾರ ಕ್ಷೇತ್ರದ ಕಾಶಿ ಮತ್ತು ಪುಣ್ಯಭೂಮಿ ಎಂದು ತಿಳಿಸಿ ಗದುಗಿನಲ್ಲಿ ಆಚರಿಸುತ್ತಿರುವ ಇಂದಿನ ಸಹಕಾರ ಸಪ್ತಾಹಕ್ಕೆ ಹೆಚ್ಚಿನ ಮಹತ್ವವಿದೆ. ದೇಶದ ಪ್ರಪ್ರಥಮ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಸೇರಿದಂತೆ ಹಲವು ಸಹಕಾರ ಸಂಸ್ಥೆಗಳ ಸ್ಥಾಪನೆಗೆ ಈ ನೆಲ ಹಾಗೂ ಈ ನೆಲದ ಸಹಕಾರಿಗಳು ಕಾರಣರಾಗಿದ್ದಾರೆ.

ಇದು ಕೆ.ಹೆಚ್.ಪಾಟೀಲರವರ ಕರ್ಮಭೂಮಿ ಎಂದು ತಿಳಿಸಿದರು. ಸಹಕಾರಿಗಳ ಪ್ರಯತ್ನಕ್ಕೆ ಸರಕಾರದ ಪ್ರೋತ್ಸಾಹವಿದ್ದರೆ ಸಹಕಾರಿ ಕ್ಷೇತ್ರದ ಮೂಲಕ ಆರ್ಥಿಕ ಅಭಿವೃದ್ಧಿ ಸಾಧ್ಯ ಎಂದು ಹೇಳುತ್ತ ಈ ದೇಶದಲ್ಲಿ ಸಹಕಾರಿ ಕ್ಷೇತ್ರ ಮಾಡದ ಸಾಧನೆಯಿಲ್ಲ. ಆದಾಗ್ಯು ಇನ್ನು ಕೆಲವು ಕ್ಷೇತ್ರಗಳನ್ನು ಪತ್ತೆಮಾಡಿ ಸಹಕಾರದ ಕಕ್ಷೆಗೆ ಒಳಪಡಿಸುವುದು ಅಗತ್ಯವೆನಿಸುತ್ತದೆ. ಅದರಲ್ಲಿ ಶುದ್ಧ ಕುಡಿಯುವ ನೀರಿನ ಸರಬರಾಜು ಅತ್ಯಂತ ಮಹತ್ವದ್ದೆನಿಸುತ್ತದೆ. ಈ ದೇಶದಲ್ಲಿ ಅಶುದ್ಧ ನೀರು ಬಳಸಿ ಪ್ರತಿ 20 ಸೆಕೆಂಡಿಗೆ ಒಂದು ಮಗು ಸಾಯುತ್ತದೆ ಎಂದು ತಿಳಿಸಿ ಈ ನಿಟ್ಟಿನಲ್ಲಿ ಈ ದೇಶದ ಪ್ರತಿಯೊಬ್ಬ ನಾಗರಿಕನಿಗೂ ಶುದ್ಧಕುಡಿಯುವ ನೀರಿನ ಅವಶ್ಯಕತೆಯಿದೆ. ಈ ಕಾರ್ಯವನ್ನು ಸಹಕಾರ ಕ್ಷೇತ್ರದಿಂದ ನಿರ್ವಹಿಸಲು ಸಾಧ್ಯವಿದೆ. ಸಹಕಾರಿ ಕ್ಷೇತ್ರಕ್ಕೆ ದೇಶಾದ್ಯಂತ ಪ್ರತಿ ಗ್ರಾಮದಲ್ಲೂ ವ್ಯವಸ್ಥೆಯಿರುವುದರಿಂದ ಶುದ್ಧಕುಡಿಯುವ ನೀರಿನ ಪೂರೈಕೆಯ ಕಾರ್ಯವನ್ನು ಸಹಕಾರಿ ಕ್ಷೇತ್ರ ಸಮರೋಪಾದಿಯಲ್ಲಿ ಕೈಗೆತ್ತಿಕೊಳ್ಳಬೇಕಿದೆ. ಶುದ್ಧ ನೀರು ಶ್ರೀಸಾಮಾನ್ಯನ ಹಕ್ಕು ಎಂದು ತಿಳಿಸಿದರು. ಈ ಕಾರ್ಯದಲ್ಲಿ ಸರಕಾರ ಹಾಗೂ ಸ್ಥಳಿಯ ಸಂಸ್ಥೆಗಳು ನೆರವು ಅಗತ್ಯ ಎಂದರು.



# ಸಹಕಾರ ಕ್ಷೇತ್ರದಲ್ಲಿ ಪ್ರಾಮಾಣಿಕತೆ ಮುಖ್ಯ – ಎಸ್.ಎಸ್.ಪಾಟೀಲ್



ವೇದಿಕೆಯಲ್ಲಿ ವಿಕಾಸ ಸೌಹಾರ್ದ ಸಹಕಾರಿ ಪದಾಧಿಕಾರಿಗಳು ಹಾಗೂ ಹಿರಿಯ ಸಹಕಾರಿ ಗಣ್ಯರು

ಮಾಜಿ ಸಚಿವ ಹಾಗೂ ಹಿರಿಯ ಸಹಕಾರಿ ಶ್ರೀ ಎಸ್.ಎಸ್.ಪಾಟೀಲ್‌ರವರು ಮುಖ್ಯ ಅತಿಥಿಯಾಗಿ ಸನ್ಮಾನ ಸ್ವೀಕರಿಸಿ, ಸಹಕಾರ ಕ್ಷೇತ್ರದಲ್ಲಿ ಒಳ್ಳೆಯ ಸಹಕಾರಿಗಳು ಹಾಗೂ ಉತ್ತಮ ಅಧಿಕಾರಿಗಳು ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಿದ ಪರಿಣಾಮವಾಗಿ ಸಹಕಾರ ಕ್ಷೇತ್ರ ಬೃಹದಾಕಾರವಾಗಿ ಬೆಳೆಯಲು ಸಾಧ್ಯವಾಗಿದೆ. ಈ ಪ್ರಾಮಾಣಿಕತೆ ನಿರಂತರವಾಗಿದ್ದಾಗ ಮಾತ್ರ ಸಹಕಾರಿ ಕ್ಷೇತ್ರ ಬಲಾಢ್ಯವಾಗಿ ಉತ್ತಮ ಗುಣ ಮಟ್ಟವನ್ನು ಕಾಯ್ದುಕೊಂಡು ಕಾರ್ಯನಿರ್ವಹಿಸಬಹುದು. ಸಂವಿಧಾನದ 97ನೇ ತಿದ್ದುಪಡಿಯಲ್ಲಿ ಅಳವಡಿಸಿರುವ ಹೆಚ್ಚಿನ ವಿಷಯಗಳು ನಮ್ಮ ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ 1997ರಲ್ಲಿಯೆ ಅಳವಡಿಸಲಾಗಿದೆ. ಇಡೀ ದೇಶದಲ್ಲಿ ಸಹಕಾರ ನೀತಿಯನ್ನು ಪ್ರಥಮ ಬಾರಿ ಜಾರಿಗೊಳಿಸಿದ ರಾಜ್ಯ ಕರ್ನಾಟಕ. ತಪ್ಪುಗಳಾಗುವುದು ಸಹಜ.ಅವುಗಳನ್ನು ಸರಿಪಡಿಸಿ ಅಭಿವೃದ್ಧಿಯತ್ತ ಸಹಕಾರ ಕ್ಷೇತ್ರವನ್ನು ತೆಗೆದುಕೊಂಡು ಹೋಗುವುದು ನಮ್ಮೆಲ್ಲರ ಜವಾಬ್ದಾರಿ ಎಂದು ತಿಳಿಸಿದರು.

# ಸಾಲಮನ್ನಾ ಅವೈಜ್ಞಾನಿಕ – ಜಿ.ಟಿ. ದೇವೆಗೌಡ

ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿದ ಸಹಕಾರ ಮಹಾ ಮಂಡಳದ ಅಧ್ಯಕ್ಷ ಶ್ರೀ ಜಿ.ಟಿ.ದೇವೆಗೌಡರವರು ಮಾತನಾಡಿ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಹುಲಿಕೋಟೆಯ ಹುಲಿ ಎಂದೇ ಪ್ರಖ್ಯಾತರಾಗಿದ್ದ ಹಿರಿಯ ಸಹಕಾರಿ ದಿ.ಕೆ.ಹೆಚ್ ಪಾಟೀಲರವರ ಕೊಡುಗೆ ಅಪಾರ. ಸಹಕಾರ ಕ್ಷೇತ್ರದ ಮೂಲಕ ಹಲವಾರು ಸಂಸ್ಥೆಗಳನ್ನು ಹುಟ್ಟುಹಾಕಿ ಈ ಭಾಗದ ಜನರ ಆರ್ಥಿಕ ಅಭಿವೃದ್ಧಿಗೆ ಕಾರಣರಾದವರು. ಅಂದು ಅವರು ದೂರದೃಷ್ಟಿಯಿಂದ ಕಟ್ಟಿ ಬೆಳೆಸಿದ ಸಹಕಾರಿ ಸಂಸ್ಥೆಗಳನ್ನು ನಾವು ಉಳಿಸಿ ಬೆಳೆಸಿಕೊಂಡು ಹೋಗಬೇಕಿದೆ. ಇಂದು ಸಹಕಾರಿ ಕ್ಷೇತ್ರಕ್ಕೆ ಹಬ್ಬ. ಹಿರಿಯರ ಸೇವೆಯನ್ನು ಸ್ಮರಿಸುವ ದಿನ. ಸಾಧಕರಿಗೆ ಸನ್ಮಾನಿಸುವ ದಿನ ಸಹಕಾರಿಗಳ ಉತ್ಸವದ ದಿನ ಶೋಷಣಾ ರಹಿತ ಸಮಾಜ ನಿರ್ಮಾಣ ಸಹಕಾರದ ಗುರಿ ಸಹಕಾರ ಕ್ಷೇತ್ರದ ಅಭಿವೃದ್ಧಿಯಲ್ಲಿ ಸರಕಾರಕ್ಕೂ ಹೆಚ್ಚಿನ ಜವಾಬ್ದಾರಿಯಿದೆ. ರೈತರ ಸಾಲಮನ್ನಾದಂತಹ ಅವೈಜ್ಞಾನಿಕ ಯೋಜನೆಗಳ ಜಾರಿಯಿಂದ ಸಹಕಾರ ಕ್ಷೇತ್ರದ ಬೆಳವಣಿಗೆ ಕುಂಠಿತವಾಗುತ್ತದೆ ಎಂದು ತಿಳಿಸಿದರು.



97ನೇ ಸಂವಿಧಾನದ ತಿದ್ದುಪಡಿ ಸಲಹಾ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ ಹಿರಿಯ ಸಹಕಾರಿ ಶ್ರಿ ಹೆಚ್.ಕೆ.ಪಾಟೀಲರವರು ಸಮಿತಿಯಲ್ಲಿ ಸಹಕಾರಿಗಳನ್ನು ಪ್ರತಿನಿಧಿಸಿ ಸಹಕಾರ ಕ್ಷೇತ್ರಕ್ಕೆ ಕಾಯಕಲ್ಪವನ್ನು ಒದಗಿಸುವಂತಹ ಮಹತ್ವ ತಿದ್ದುಪಡಿಯ ಜಾರಿಗೆ ಕಾರಣರಾಗಿದ್ದಾರೆ.

ಈ ದೇಶದ ಎಲ್ಲ ಸಹಕಾರಿಗಳ ಪರವಾಗಿ ಅವರನ್ನು ಅಭಿನಂದಿಸಿದರು. ನೀರು ಬಳಕೆದಾರರ ಸಹಕಾರ ಸಂಸ್ಥೆಗಳನ್ನು ಹುಟ್ಟು ಹಾಕಿದ ಹರಿಕಾರ ಹೆಚ್.ಕೆ.ಪಾಟೀಲರವರು ಇದೀಗ ಶುದ್ಧಕುಡಿಯುವ ನೀರಿನ ಪೂರೈಕೆಯನ್ನು ಸಹಕಾರಿ ಸಂಸ್ಥೆಗಳ ಮೂಲಕ ಮಾಡುವ ಅತ್ಯಂತ ಮಹತ್ವದ ಯೋಜನೆಯ ಹರಿಕಾರರೂ ಆಗಿದ್ದಾರೆ. ಅವರ ಈ ಕನಸನ್ನು ರಾಜ್ಯದಾದ್ಯಂತ ಜಾರಿಗೊಳಿಸುವ ಕಾರ್ಯವನ್ನು ಎಲ್ಲ ಸಹಕಾರಿ ಸಂಸ್ಥೆಗಳು ಯಶಸ್ವಿಯಾಗಿ ನಿರ್ವಹಿಸುವುದು ಇಂದಿನ ಪ್ರಥಮ ಹಾಗೂ ಆದ್ಯತೆಯ ಕಾರ್ಯವಾಗಬೇಕು ಎಂದು ತಿಳಿಸಿದರು.



ಮೈಸೂರಿನ ಕಲಾಮಂದಿರದಲ್ಲಿ ಏರ್ಪಡಿಸಲಾಗಿದ್ದ 59ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮದಲ್ಲಿ ಸಹಕಾರ ಕ್ಷೇತ್ರದಲ್ಲಿ ಗಣನೀಯ ಸೇವೆಗೈದ ಸಹಕಾರಿಗಳಿಗೆ ಹಾಗೂ ಇಲಾಖಾಧಿಕಾರಿಗೆ ಸಹಕಾರ ರತ್ನ ಪ್ರಶಸ್ತಿ ನೀಡಿ ಪುರಸ್ಕರಿಸಲಾಯಿತು ಶ್ರೀಯುತರಾದ ಶ್ರೀ ವಿಶ್ವನಾಥ್ ಚ. ಹಿರೇಮಠ, ಶ್ರೀ ಪ್ರಕಾಶ್ ತಪಾಶೆಟ್ಟಿ, ಶ್ರೀ ರವಿಶಂಕರ್, ಶ್ರೀ ವಿಜಯದೇವ್, ಶ್ರೀ ಹಳಸೆ ಶಿವಣ್ಣ, ಶ್ರೀಮತಿ ಸಿ.ಎಸ್. ಮಹಾಲಕ್ಷ್ಮೀ ಹಾಗೂ ಶ್ರೀ ಆರ್.ಎಸ್. ಹುಚ್ಚಾಚಾರಿರವರುಗಳಿಗೆ ಸನ್ಮಾನಿಸಿ ಪುರಸ್ಕರಿಸಲಾಯಿತು.



ಬೀದರರನ ಕಲ್ಯಾಣ ಸೌಹಾರ್ದ ಸಹಕಾರಿಗೆ ಸಹಕಾರ ಮಂತ್ರಿ ಶ್ರೀ ಬಿ.ಜೆ.ಪಟ್ಟಸ್ವಾಮಿಯವರ ಭೇಟಿನೀಡಿದ ಸಂದರ್ಭದಲ್ಲಿ ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತೀಕರ್ ಹಾಗೂ ಶ್ರೀನಿಧಿ ಪತ್ತಿನ ಸಹಕಾರಿಯ ಅಧ್ಯಕ್ಷರಾದ ಶ್ರೀ ಸಂಜೀವ ಕುಮಾರ್ ಪಾಟೀಲ್ ಇದ್ದಾರೆ.

## ವಿಶ್ವನಾಥ ಹಿರೇಮಠರಿಗೆ ಸಹಕಾರ ರತ್ನ ಪ್ರಶಸ್ತಿ



ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷ ಹಾಗೂ ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ವಿಶ್ವನಾಥ ಹಿರೇಮಠರವರಿಗೆ ಕರ್ನಾಟಕ ರಾಜ್ಯದ ಸಹಕಾರ ರತ್ನ ಪ್ರಶಸ್ತಿಯನ್ನು ಉಪ ಮುಖ್ಯಮಂತ್ರಿ ಆರ್. ಅಶೋಕ್ ಹಾಗೂ ಸಹಕಾರ ಸಚಿವರಾದ ಬಿ.ಜೆ. ಪುಟ್ಟಸ್ವಾಮಿ ಪ್ರದಾನಮಾಡಿ ಗೌರವಿಸಿದರು. ಸಂಯುಕ್ತ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಹಾಗೂ ಎಲ್ಲ ಸಿಬ್ಬಂದಿಯವರು ಶ್ರೀಯುತರಿಗೆ ಅಭಿನಂದನೆ ಸಲ್ಲಿಸಿದ್ದಾರೆ.

# ಬಳ್ಳಾರಿಯಲ್ಲಿ "ಸೌಹಾರ್ದ ಸಹಕಾರಿಗಳ ಗುಣಮಟ್ಟ ನಿರ್ವಹಣೆ" ತರಬೇತಿ ಕಾರ್ಯಕ್ರಮ ಯಶಸ್ವಿ



ಬಳ್ಳಾರಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರುಗಳು ಮತ್ತು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗಾಗಿ ದಿನಾಂಕ : 09-11-2012 ರಂದು ಬಿ.ಡಿ.ಸಿ.ಸಿ. ಬ್ಯಾಂಕ್ ಆವರಣ, ಹೋಟೆಲ್ ಶಾನಬಾಗ್ ಹತ್ತಿರ, ಹೊಸಪೇಟೆ ಇಲ್ಲಿ "ಸೌಹಾರ್ದ ಸಹಕಾರಿಗಳ ಗುಣಮಟ್ಟ ನಿರ್ವಹಣೆ" ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಈ ಕಾರ್ಯಕ್ರಮವು ಬೆಳಗ್ಗೆ 10.30ಕ್ಕೆ ಆರಂಭವಾಯಿತು. ಈ ಕಾರ್ಯಕ್ರಮದ ಉದ್ಘಾಟಕರಾಗಿ ಶ್ರೀ ಗುರುನಾಥ ಜ್ಯಾಂತೀಕರ, ಉಪಾಧ್ಯಕ್ಷರು, ಕ.ರ.ಸೌ.ಸಂ.ಸ.ನಿ., ಬೆಂಗಳೂರು ಆಗಮಿಸಿ, ಕಾರ್ಯಕ್ರಮವನ್ನು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು. ಸಭೆಯ ಅಧ್ಯಕ್ಷತೆಯನ್ನು ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇದರ ಬಳ್ಳಾರಿ ಜಿಲ್ಲಾ ನಿರ್ದೇಶಕರಾದ ಶ್ರೀ ಎಲ್. ಎಸ್. ಆನಂದ ರವರು ವಹಿಸಿದ್ದರು. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಶ್ರೀ ವಿಶ್ವನಾಥ ಚ. ಹಿರೇಮಠ, ಅಧ್ಯಕ್ಷರು, ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕ್, ಹೊಸಪೇಟೆ ಹಾಗೂ ಶ್ರೀ ಜಿ. ಉಮೇಶ್, ಸಹಕಾರಿ ಸಂಘಗಳ ಸಹಾಯಕ ನಿಬಂಧಕರು, ಹೊಸಪೇಟೆ ಇವರುಗಳು ಆಗಮಿಸಿದರು. ಈ ಕಾರ್ಯಕ್ರಮದ ಆಗಮಿಸಿದ ಅತಿಥಿಗಳನ್ನು ಶ್ರೀ ಸಂಜಯ ಕೋರಟಕರ, ವಿಭಾಗೀಯ ಅಧಿಕಾರಿ, ಗುಲಬರ್ಗಾ ಇವರು ಸ್ವಾಗತಿಸಿದರು.

ತರಬೇತಿ ಕಾರ್ಯಕ್ರಮದ ಉದ್ಘಾಟನೆ ನಂತರ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸಗಳನ್ನು ಹಮ್ಮಿಕೊಳ್ಳಲಾಗಿತ್ತು. ಮೊದಲಿಗೆ "ಸಂವಿಧಾನದ 97ನೇ ತಿದ್ದುಪಡಿ ಆಧಾರಿತ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಗೆ ನಿರೀಕ್ಷಿತ ತಿದ್ದುಪಡಿಗಳು" ಎಂಬ ವಿಷಯದ ಬಗ್ಗೆ ಶ್ರೀ ಸಿ.ಎನ್. ಪರಶಿವಮೂರ್ತಿ, ಅಪರ ನಿಬಂಧಕರು(ನಿ), ಮೈಸೂರು. ಇವರು ಉಪನ್ಯಾಸ ನೀಡಿದರು.

ನಂತರ ಶ್ರೀ ಭಾಸ್ಕರ ಹೆಗ್ಗಡೆ ಕಾಗೇರಿ, ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು "ಆಡಳಿತ ಸಮಿತಿಯ ಸದಸ್ಯರ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಶಾಸನ ಬದ್ಧ ಕಾರ್ಯಗಳು" ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಭೋಜನ ವಿರಾಮದ ನಂತರ ಶ್ರೀ ವೀರೇಶ ಹಿರೇಮಠ, ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಭ್ರಮರಾಂಭ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ. ಇವರು "ಸೌಹಾರ್ದ ಸಹಕಾರಿಗಳಲ್ಲಿ ಲೆಕ್ಕಪತ್ರಗಳ ನಿರ್ವಹಣೆ" ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು.

ನಂತರ ಸಂಜೆ 4.30 ರಿಂದ 5.30 ರವರೆಗೆ ಸಾಮೂಹಿಕ ಚರ್ಚೆಯನ್ನು ಏರ್ಪಡಿಸಲಾಗಿತ್ತು. ಈ ಸಮಯದಲ್ಲಿ ಸಹಕಾರಿ ಪ್ರತಿನಿಧಿಗಳ ಪ್ರಶ್ನೆಗಳಿಗೆ ಸಂಪನ್ಮೂಲ ವ್ಯಕ್ತಿಗಳು ಉತ್ತರಿಸಿದರು. ಕಾರ್ಯಕ್ರಮವು ಸಂಜೆ 5.30ಕ್ಕೆ ಯಶಸ್ವಿಯಾಗಿ ಮುಕ್ತಾಯಗೊಂಡಿತು. ಈ ತರಬೇತಿ ಕಾರ್ಯಕ್ರದಲ್ಲಿ 37 ಸೌಹಾರ್ದ ಸಹಕಾರಿಗಳಿಂದ 78 ಜನ ಸಹಕಾರಿ ಪ್ರತಿನಿಧಿಗಳು ಭಾಗವಹಿಸಿ, ತರಬೇತಿ ಕಾರ್ಯಕ್ರಮದ ಪ್ರಯೋಜನ ಪಡೆದುಕೊಂಡರು.

## ಸಹಕಾರ ಭಾರತಿಯ ರಾಷ್ಟ್ರೀಯ ಅಧಿವೇಶನ

ಸಹಕಾರ ಭಾರತಿಯ ರಾಷ್ಟ್ರೀಯ ಅಧಿವೇಶನ 2013ರ ಜನವರಿ 17,18,19ರಂದು ಬೆಂಗಳೂರಿನ ಬಸವನಗುಡಿಯ ನ್ಯಾಷನಲ್ ಹೈಸ್ಕೂಲ್ ಮೈದಾನದಲ್ಲಿ ನಡೆಯಲಿದೆ. ಅಧೀವೇಶನದಲ್ಲಿ ರಾಷ್ಟ್ರದ ಐದು ಸಾವಿರಕ್ಕೂ ಹೆಚ್ಚು ಸಹಕಾರಿ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಅಧಿವೇಶನದಲ್ಲಿ ಪ್ರಮುಖವಾಗಿ ನೇರ ತೆರಿಗೆ ಸಂಹಿತೆ, ಸೇವಾ ತೆರಿಗೆ, 97ನೇ ಸಂವಿಧಾನ ತಿದ್ದುಪಡಿ ಹಾಗೂ ಸಹಕಾರ ಕ್ಷೇತ್ರದ ಸವಾಲುಗಳು ಹಾಗೂ ಅವಕಾಶಗಳ ಬಗ್ಗೆ ಸಮಗ್ರ ಚರ್ಚೆಯಾಗಲಿದೆ. ಬನ್ನಿ ಭಾಗವಹಿಸಿ.

**– ಸಂಚಾಲಕರು**



ಗೌರಿಶಂಕರ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ ಹುನಗುಂದದಲ್ಲಿ 59 ನೇ ಅಖಿಲ ಭಾರತ ಸಹಕಾರಿ ಸಪ್ತಾಹ ಆಚರಣೆ



ಕವಲೇದುರ್ಗ ಬಹುಉದ್ದೇಶಿ ಸೌಹಾರ್ದ ಸಹಕಾರಿ ನಿಯಮಿತ ಹುನಗುಂದದಲ್ಲಿ 59 ನೇ ಅಖಿಲ ಭಾರತ ಸಹಕಾರಿ ಸಪ್ತಾಹ ಆಚರಣೆ.



ಸಾಯಿ ಗಣೇಶ ಸೌಹಾರ್ದ ಕ್ರೆಡಿಟ್ ಸಹಕಾರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಸತೀಶ್‌ಚಂದ್ರರವರು ಭೇಟಿ ನೀಡಿದ ಸಂದರ್ಭ.




ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಸತೀಶ್‌ಚಂದ್ರರವರು ಹಂಸ ಚೈತನ್ಯ ಸೌಹಾರ್ದ ಕ್ರೆಡಿಟ್ ಸಹಕಾರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಮ್ಯಾಗಸೇಸೆ ಪ್ರಶಸ್ತಿ ಪುರಸ್ಕೃತ ಹರೀಶ್‌ಹಂದೆ ಹಾಗೂ ಸಹಕಾರಿ ಅಧ್ಯಕ್ಷರು ಉಪಸ್ಥಿತರಿದ್ದರು.




ಸಂಯುಕ್ತ ಸಹಕಾರಿಯ ಅಧ್ಯಕ್ಷರ ಭೇಟಿ –ಜೇವರ್ಗಿ ಸೌಹಾರ್ದ ಪತ್ತಿನ ಸಹಕಾರಿ ನಿ., ಗುಲಬರ್ಗಾ.



59ನೇ ಸಹಕಾರ ಸಪ್ತಾಹ ಸಮಾರಂಭ ಕೊಪ್ಪ ಪುರಭವನದಲ್ಲಿ ನಡೆಯಿತು. ಚಿಕ್ಕಮಗಳೂರು ಜಿಲ್ಲೆಯ ಅತ್ಯುತ್ತಮ ಸಹಕಾರಿ ಪ್ರಶಸ್ತಿಯನ್ನು ಕೊಪ್ಪದ ಯಡಗೆರೆ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ನಿಯಮಿತ ಈ ಸಹಕಾರಿಗೆ ನೀಡಲಾಯಿತು. ಪ್ರಶಸ್ತಿಯನ್ನು ಕರ್ನಾಟಕ ಸರ್ಕಾರದ ಆಹಾರ ಮತ್ತು ನಾಗರೀಕ ಪೂರೈಕೆಗಳ ಮಂತ್ರಿಗಳಾದ ಸನ್ಮಾನ್ಯ ಶ್ರೀ ಡಿ.ಎನ್.ಜೀವರಾಜ್ ಪ್ರದಾನ ಮಾಡಿದರು.

## ಅನುಮತಿ ವಾಪಸ್

ಬೆಂಗಳೂರು ಉದ್ದೇಶಿತ ಋಷಿ ಸೌಹಾರ್ದ ಪತ್ತಿನ ಸಹಕಾರಿ ನಿ., ನೆಲಮಂಗಲ ಬೆಂಗಳೂರು ಗ್ರಾಮಾಂತ್ರ ಜಿಲ್ಲೆ ಇದರ ನೋಂದಣಿ ಪೂರ್ವ ಷೇರು ಸಂಗ್ರಹಣೆಗೆ ನೀಡಲಾಗಿದ್ದ ಅನುಮತಿಯನ್ನು ಹಿಂಪಡೆಯುವ ಬಗ್ಗೆ ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ 1 ಅಲಿ ಆಸ್ಕರ ರಸ್ತೆ, ಬೆಂಗಳೂರು -52 ಇದರ ಸಂಖ್ಯೆ : ಆರ್‌ಎಸ್‌ಆರ್ /ಸೌಹಾರ್ದ/246/2011-12 ದಿನಾಂಕ:07.11.2012ರಂದು ತಿಳಿಸಲಾಗಿದೆ.

## ಜನವರಿ 1 ರಂದು ಸೌಹಾರ್ದ ಸಹಕಾರಿ ದಿನಾಚರಣೆ ಆಚರಿಸಲು ಕರೆ

ಕರ್ನಾಟಕ ರಾಜ್ಯದಲ್ಲಿ ಜನವರಿ 1, 2001 ರಂದು ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದ ಪ್ರಯುಕ್ತ ಜನವರಿ 1ರಂದು ರಾಜ್ಯಾದ್ಯಂತ ಸೌಹಾರ್ದ ಸಹಕಾರಿಗಳು "ಸೌಹಾರ್ದ ಸಹಕಾರಿ ದಿನ"ವನ್ನಾಗಿ ಆಚರಿಸಲು ಸಂಯುಕ್ತ ಸಹಕಾರಿಯು ಎಲ್ಲ ಸಹಕಾರಿಗಳಿಗೆ ಈ ಮೂಲಕ ಸೂಚಿಸಿದೆ.

ಆ ದಿನದಂದು ಪ್ರತಿಯೊಂದು ಸಹಕಾರಿಯ ತನ್ನ ಆವರಣದಲ್ಲಿ ಸರಳ ಸಮಾರಂಭವನ್ನು ಏರ್ಪಡಿಸಿ, ಸಹಕಾರಿ ಗಣ್ಯರನ್ನು ಹಾಗೂ ಹಿರಿಯ ಸಹಕಾರಿಗಳನ್ನು ಆಮಂತ್ರಿಸಿ ಸಹಕಾರಿ ಧ್ವಜವನ್ನು ಹಾರಿಸಬೇಕು. ಸಹಕಾರಿಯ ಅಸ್ತಿತ್ವವನ್ನು ಸಾರ್ವಜನಿಕರಿಗೆ ತೋರಿಸುವಂತಹ, ಸಭೆ ಸಮಾರಂಭಗಳನ್ನು ಏರ್ಪಡಿಸಿ ಸಹಕಾರಿಯ ಸಾಧನೆಗಳನ್ನು, ಸೇವಾ ಸೌಲಭ್ಯಗಳನ್ನು ಹಾಗೂ ಮುಂದಿನ ದಿನಗಳಲ್ಲಿನ ಯೋಜನೆಗಳನ್ನು ಪ್ರಚಾರ ಮಾಡುವಂತಹ ಹಾಗೂ ಪ್ರಬಂಧ ಹಾಗೂ ಚರ್ಚಾ ಸ್ಪರ್ಧೆ ಗಳನ್ನು ಏರ್ಪಡಿಸುವ ಮೂಲಕ ಸಹಕಾರಿ ಕ್ಷೇತ್ರದ ಬಗ್ಗೆ ಅರಿವು ಮೂಡಿಸುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದಾಗಿದೆ.

ಸೌಹಾರ್ದ ಸಹಕಾರಿಯ ದಿನಾಚರಣೆಯ ಕಾರ್ಯಕ್ರಮದ ಒಂದು ಉತ್ತಮ ಛಾಯಾಚಿತ್ರ ಹಾಗೂ ವರದಿಯನ್ನು ಸಂಯುಕ್ತ ಸಹಕಾರಿಗೆ ಕಳುಹಿಸಿಕೊಡಲು ಕೋರಿದೆ.



ಶ್ರೀ ಕನ್ಯಕಾಪರಮೇಶ್ವರಿ ಸೌಹಾರ್ದ ಸಹಕಾರಿಯನ್ನು ಶ್ರೇಷ್ಠ ಸೌಹಾರ್ದ ಸಹಕಾರಿ ಎಂದು ಅಖಿಲ ಭಾರತ ಸಹಕಾರ ಸಪ್ತಾಹದಲ್ಲಿ ಸನ್ಮಾನಿಸಲಾಯಿತು.



ಉಡುಪಿಯಲ್ಲಿ ಭಾರತ್ ಕ್ರೆಡಿಟ್ ಸೌಹಾರ್ದ ಸಹಕಾರಿಯ ದಶಮಾನೋತ್ಸವ ಕಾರ್ಯಕ್ರಮ ನಡೆಯಿತು.

# ಸ್ವಾಭಿಮಾನಿ ಸಹಕಾರಿ



## ಜನವರಿ

| ಸೋಮ | ಮಂ | ಬುಧ | ಗುರು | ಶುಕ್ರ | ಶನಿ | ಭಾನು |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | 30 | 31 | | | |

## ಫೆಬ್ರವರಿ

| ಸೋಮ | ಮಂ | ಬುಧ | ಗುರು | ಶುಕ್ರ | ಶನಿ | ಭಾನು |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 | | | |

## ಮಾರ್ಚ್

| ಸೋಮ | ಮಂ | ಬುಧ | ಗುರು | ಶುಕ್ರ | ಶನಿ | ಭಾನು |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 | 29 | 30 | 31 |

## ಏಪ್ರಿಲ್

| ಸೋಮ | ಮಂ | ಬುಧ | ಗುರು | ಶುಕ್ರ | ಶನಿ | ಭಾನು |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |
| 29 | 30 | | | | | |

## ಮೇ

| ಸೋಮ | ಮಂ | ಬುಧ | ಗುರು | ಶುಕ್ರ | ಶನಿ | ಭಾನು |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | 29 | 30 | 31 | | |

## ಜೂನ್

| ಸೋಮ | ಮಂ | ಬುಧ | ಗುರು | ಶುಕ್ರ | ಶನಿ | ಭಾನು |
|---|---|---|---|---|---|---|
| | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |

## ವಿಶೇಷ ದಿನಗಳು

ಜನವರಿ : 1 - ಸೌಹಾರ್ದ ಸಹಕಾರಿ ದಿನಾಚರಣೆ । 14 -
25 - ಈದ್-ಮಿಲಾದ್ । 26 -
ಮಾರ್ಚ್ : 10 - ಮಹಾಶಿವರಾತ್ರಿ । 29 - ಗುಡ್ ಫ್ರೈಡೇ
ಏಪ್ರಿಲ್ : 11 - ಚಾಂದ್ರಮಾನ ಯುಗಾದಿ । 14 - ಡಾ.
23 - ಮಹಾವೀರ ಜಯಂತಿ
ಮೇ : 1 - ಕಾರ್ಮಿಕ ಜಯಂತಿ । 13 - ಬಸವ
ಆಗಸ್ಟ್ : 9 - ರಂಜಾನ್ । 15 - ಸ್ವಾತಂತ್ರ್ಯ ದಿನ । 16 -
ಸೆಪ್ಟೆಂಬರ್ : 8 - ಸ್ವರ್ಣಗೌರೀ ವ್ರತ । 9 - ಗಣೇಶ ಚತುರ್ಥಿ

# 2013



## ಜುಲೈ

| ಸೋಮ | ಮಂ | ಬುಧ | ಗುರು | ಶುಕ್ರ | ಶನಿ | ಭಾನು |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |
| 29 | 30 | 31 | | | | |

## ಆಗಸ್ಟ್

| ಸೋಮ | ಮಂ | ಬುಧ | ಗುರು | ಶುಕ್ರ | ಶನಿ | ಭಾನು |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | 31 | |

## ಸೆಪ್ಟೆಂಬರ್

| ಸೋಮ | ಮಂ | ಬುಧ | ಗುರು | ಶುಕ್ರ | ಶನಿ | ಭಾನು |
|---|---|---|---|---|---|---|
| 30 | | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |

## ಕ್ಟೋಬರ್

| ಸೋಮ | ಮಂ | ಬುಧ | ಗುರು | ಶುಕ್ರ | ಶನಿ | ಭಾನು |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | 30 | 31 | | | |

## ನವಂಬರ್

| ಸೋಮ | ಮಂ | ಬುಧ | ಗುರು | ಶುಕ್ರ | ಶನಿ | ಭಾನು |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 | 29 | 30 | |

## ಡಿಸೆಂಬರ್

| ಸೋಮ | ಮಂ | ಬುಧ | ಗುರು | ಶುಕ್ರ | ಶನಿ | ಭಾನು |
|---|---|---|---|---|---|---|
| 30 | 31 | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |

ಕರ ಸಂಕ್ರಾಂತಿ ।
ವ
ೇಡ್ಕರ್ ಜ./ಸೌರ ಯುಗಾದಿ ।
ತಿ
ವರಮಹಾಲಕ್ಷ್ಮೀ ವ್ರತ

**ಅಕ್ಟೋಬರ್ :** 2 - ಗಾಂಧಿ ಜಯಂತಿ । 4 - ಮಹಾಲಯ ಅಮಾವಾಸ್ಯೆ ।
13 - ಮಹಾನವಮಿ / ಆಯುಧ ಪೂಜೆ ।
14 - ವಿಜಯದಶಮಿ । 16 - ಬಕ್ರಿದ್ । 18 - ಮಹರ್ಷಿ ವಾಲ್ಮೀಕಿ ಜಯಂತಿ

**ನವಂಬರ್ :** 1 - ರಾಜ್ಯೋತ್ಸವ । 2 - ನರಕ ಚತುರ್ದಶಿ । 3 - ದೀಪಾವಳಿ ಅಮಾವಾಸ್ಯೆ ।
4 - ಬಲಿಪಾಡ್ಯಮಿ ।
14 - ಮೊಹರಂ ಕೊನೇ ದಿನ । 17 - ಹುತ್ತರಿ / ಗುರುನಾನಕ್ ಜಯಂತಿ ।
20 - ಕನಕದಾಸ ಜಯಂತಿ

**ಡಿಸೆಂಬರ್ :** 25 - ಕ್ರಿಸ್‌ಮಸ್

# ಸುಂದರ ಸಾಮಾಜಿಕ ವ್ಯವಸ್ಥೆಯ ದೇಶ ನಮ್ಮದು – ಸಂತೋಷ್

(ಹಿಂದಿನ ಸಂಚಿಕೆಯಿಂದ)

ಸಹಕಾರ ಚಳುವಳಿ ಯಾವುದೇ ದೇಶದಲ್ಲಿ ಪ್ರಾರಂಭವಾಗಿದ್ದರೂ ಭಾರತದಲ್ಲಿ ಮಾತ್ರ ಚೆನ್ನಾಗಿ ನೆಲೆಯೂರಿದೆ. ಸಮಗ್ರ ಸಹಕಾರಿ ಕ್ಷೇತ್ರದ ಅವಲೋಕನೆ ಮಾಡಿದಾಗ ಕೇವಲ 10 ರಿಂದ 20 ಶೇಕಡಾ ಸಹಕಾರಿ ಸಂಘಗಳು ಆಪರೇಷನ್ ಸೂಪರ್‌ಸೀಡ್ ನಂತಹ ವ್ಯಾಧಿಗೆ ಒಳಪಟ್ಟಿರುತ್ತವೆ. 80ಕ್ಕಿಂತಲು ಹೆಚ್ಚು ಸಹಕಾರಿ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇದಕ್ಕೆ ಮೂಲಭೂತ ಕಾರಣ ನಮ್ಮ ದೇಶದ ಸುಂದರ, ಸಾಮಾಜಿಕ ವ್ಯವಸ್ಥೆ. ಕಾಶ್ಮೀರದಿಂದ ಹಿಡಿದು ಕನ್ಯಾಕುಮಾರಿಯವರೆಗೆ ಸುಂದರವಾಗಿರ ತಕ್ಕಂತಹ ವ್ಯವಸ್ಥೆ ನೋಡಲಿಕ್ಕೆ ಸಿಗುತ್ತದೆ.

ನಮ್ಮ ದೇಶ ಏಕೆ ಬದುಕಿದೆ ಅಂತಾ ಯೋಚಿಸಿದರೆ ಈ ಸುಂದರ ವ್ಯವಸ್ಥೆಯೇ ಕಾರಣ. ಈ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡುವುದಾದರೇ ಮೇಲ್ನೋಟಕ್ಕೆ ಅಥವಾ ಕಂಡಕೂಡಲೇ ವ್ಯವಸ್ಥೆಯ ಬಗ್ಗೆ ಅರಿವು ನಮಗಾಗುವುದಿಲ್ಲ. ಅದರ ಅಂತರಂಗವನ್ನು ಅಧ್ಯಯನ ಮಾಡಿದಾಗ ಮಾತ್ರ ಸಮಾಜದ ವ್ಯವಸ್ಥೆಯ ಬಗ್ಗೆ ಸಕಾರಾತ್ಮಕ ಮನೋಭಾವ ಅರಳುತ್ತದೆ. ಸಮಾಜದಲ್ಲಿ ಶೇಕಡಾ 99ರಷ್ಟು ಜನ ಚೆನ್ನಾಗಿದ್ದಾರೆ. ಆದರೆ ಎಲ್ಲೋ ಒಬ್ಬರು ಅಥವಾ ಇಬ್ಬರು ಅಪವಾದ. ಅದೇರೀತಿ ಸಾಮಾಜಿಕ ವ್ಯವಸ್ಥೆ ಭದ್ರವಾಗಿ ಬೆಳೆದುಕೊಂಡು ಬಂದಿರುವುದರಿಂದ ವ್ಯವಸ್ಥೆ ಸುಂದರವಾಗಿ ಕಾಣಿಸುತ್ತದೆ.

ಸಹಕಾರ ಕ್ಷೇತ್ರದ ಬೆಳವಣಿಗೆಗೆ ಅತ್ಯಂತ ಮಹತ್ವದ ಕೊಡುಗೆ ಸಹಕಾರಿ ನಾಯಕರಿಂದ ದೊರಕಬೇಕು. ಅಂದರೇ ಉತ್ತಮ ನಾಯಕತ್ವದಲ್ಲಿ ಮಾತ್ರ ಸಹಕಾರಿ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ. ಸಹಕಾರಿ ಕ್ಷೇತ್ರದ ನಾಯಕತ್ವವಹಿಸಿದವರು ಜನರ ವಿಶ್ವಾಸವನ್ನು ಸಂಪಾದಿಸಿ ಕಾರ್ಯನಿರ್ವಹಿಸಬೇಕಾಗುತ್ತದೆ. ರಾಜಕೀಯ ಮುಖಂಡರಂತೆ ಆಶ್ವಾಸನೆಗಳ ಅಡಿಯಲ್ಲಿ ಕಾರ್ಯನಿರ್ವಹಿಸಿದರೆ ಸಹಕಾರ ಕ್ಷೇತ್ರ ಬೆಳವಣಿಗೆ ಸಾಧ್ಯವಾಗುವುದಿಲ್ಲ. ಸಹಕಾರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂದರೇ, ನಿರ್ದೇಶಕರುಗಳಿಗೆ ಅಥವಾ ನಾಯಕರುಗಳಿಗೆ ಅವರ ಮನಸ್ಸಿನಲ್ಲಿ ಸಾಮಾಜಿಕ ಕಳಕಳಿ ಬಹಳ ಮಹತ್ವದ್ದು.

ಸಹಕಾರದ 7 ತತ್ವಗಳಲ್ಲಿ ಅತ್ಯಂತ ಮಹತ್ವದ್ದಾಗಿರುವ ಸಾಮಾಜಿಕ ಕಳಕಳಿ ಎಂಬುದು ಸಹಕಾರಿ ಕ್ಷೇತ್ರದ ಅಭಿವೃದ್ಧಿಯ ಮೂಲಮಂತ್ರವಾಗಿದೆ. ನಾನು ಎಲ್ಲರಿಗಾಗಿ ಎಲ್ಲರೂ ತನಗಾಗಿ ಎಂಬುದರ ತತ್ವ ಸಹಕಾರಿ ಕ್ಷೇತ್ರದ ಅಡಿಪಾಯವಾಗಿದೆ. ನಮ್ಮ ಸಂಸ್ಕೃತಿಯು ಬೆಳೆದು ಬಂದ ದಾರಿಯನ್ನು ಅವಲೋಕಿಸಿದಾಗ ಈ ತತ್ವದಡಿಯಲ್ಲಿ ನಮ್ಮ ಪೂರ್ವಜರು ಕಾರ್ಯನಿರ್ವಹಿಸಿದ ವೈಖರಿ ಮೆಚ್ಚುವಂತಹದ್ದು. ಅಂದಿನ ಅವರ ನಿಸ್ವಾರ್ಥ ಸೇವೆ ಸಾಮಾಜಮುಖಿಯಾಗಿ ಹಮ್ಮಿಕೊಳ್ಳುತ್ತಿದ್ದ ಕಾರ್ಯಗಳ ಪರಿಣಾಮವೇ ಸುಂದರ ಸಮಾಜದ ನಿರ್ಮಾಣವಾಗಿದೆ.

ನಾನು ಸಮಾಜಕ್ಕೆ ಏನಾದರೂ ಮಾಡಬೇಕು ಎನ್ನುವಂತಹ ಆಸೆ ಅವರಲ್ಲಿರುತ್ತದೆ. ಈ ಹಿನ್ನೆಲೆಯಲ್ಲಿ ಅವರ ಆಯ್ಕೆ ಸಹಕಾರಿ ಕ್ಷೇತ್ರವಾಗಿರುತ್ತದೆ. ಇವತ್ತು ಸಹಕಾರಿ ಚಳುವಳಿ ಬೃಹದಾಕಾರವಾಗಿ ಬೆಳಿದಿದೆ. ಇದಕ್ಕೆ ಕಾರಣ ಅಂದಿನ ಹಿರಿಯರು ನಮ್ಮ ಜನರ ಜೀವನ ಪದ್ಧತಿಯಲ್ಲಿ, ಆರ್ಥಿಕ ಅಭಿವೃದ್ಧಿಗಾಗಿ ಅಂದು ಬಿತ್ತಿದ ಸಹಕಾರಿ ಬೀಜ ಇಂದು ದೊಡ್ಡ ಹೆಮ್ಮರವಾಗಿ ಬೆಳೆದು ದೇಶದ ಆರ್ಥಿಕ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿ ಬೆಳೆದಿರುವುದನ್ನು ನಾವು ನೋಡುತ್ತಿದ್ದೇವೆ.

ಈ ಕ್ಷೇತ್ರ ಇನ್ನೂ ಹೆಚ್ಚು ಪರಿಣಾಮ ಕಾರಿಯಾಗಿ ಕಾರ್ಯ ನಿರ್ವಹಿಸಬೇಕಾದರೆ ಈ ವ್ಯವಸ್ಥೆ ಇನ್ನು ಬಲವಾಗಿ ಬೆಳೆಯಬೇಕು. ಇನ್ನು ಉತ್ತಮವಾಗಿ ಕಾರ್ಯನಿರ್ವಹಿಸಬೇಕು ಅದಕ್ಕಾಗಿ ಈ ಸಹಕಾರ ಕ್ಷೇತ್ರವನ್ನು ಬಲಪಡಿಸುವ ನಿಟ್ಟಿನಲ್ಲಿ ಸಹಕಾರಿ ಕಾರ್ಯಕರ್ತರು ಕಾರ್ಯ ನಿರ್ವಹಿಸಬೇಕಾಗಿರುವುದು ಅವಶ್ಯಕ. ಈ ಹಿನ್ನೆಲೆಯಲ್ಲಿ ನಾವೆಲ್ಲಾ ಸೇರಿ ಸಹಕಾರಿ ಕ್ಷೇತ್ರವನ್ನು ಇನ್ನು ಎತ್ತರಕ್ಕೆ ಬೆಳೆಸುವ ಪ್ರಯತ್ನವನ್ನು ಮಾಡೋಣ.

## ಕೆಲಸದಲ್ಲಿ ತಾಳ್ಮೆ

ಹಳೆಯಾ ಕಾಲದಲ್ಲಿ ನಮ್ಮ ಪೂರ್ವಜರು ಅವರ ಜೀವನಕ್ಕಾಗಿ ತುಂಬಾ ಕೆಲಸ ಮಾಡುತ್ತಿದ್ದರು, ಅವರು ಕಷ್ಟಪಟ್ಟು ಕೆಲಸ ಮಾಡುವುದು ಅವರಿಗೋಸ್ಕರ ಆಗಿತ್ತು ಅವರು ತಾಳ್ಮೆಯಿಂದ ಕೆಲಸ ಮಾಡುತ್ತಿದ್ದರು. ಏಕೆಂದರೆ ಅದು ಅವರ ಕೆಲಸವಾಗಿತ್ತು. ಆದರೆ ಈಗಿನ ಕಾಲದಲ್ಲಿ ಜನರು ಅವರಿಗೋಸ್ಕರ ಕೆಲಸ ಮಾಡೋದಿಲ್ಲ. ಆದುದರಿಂದ ಅವರು ತಾಳ್ಮೆ ಇಂದ ಕೆಲಸವನ್ನು ಮಾಡುತ್ತಿಲ್ಲ. ತಾಳ್ಮೆ ಅನ್ನೊದು ಮನುಷ್ಯನ ಮನಸಿನ ಸ್ಥಿತಿ ಅದು ಅವನ ಅಥವ ಅವಳ ಹಿಡಿತದಲ್ಲಿ ಇರುತ್ತದೆ. ಅದು ಸಮಯಕ್ಕೆ ಅನುಗುನವಾಗಿ ಬದಲಾಗುತ್ತಿರುತ್ತದೆ. ಅದು ಅವನ ಅಥವಾ ಅವಳ ಮುಂದೆ ಬರುವ ಪರಿಸ್ಥಿತಿಯ ಮೇಲೆ ಅವಲಂಬಿತವಾಗಿರುತ್ತದೆ. ಒಂದು ವೇಳೆ ಯಾರಾದರು ತುಂಬ ಕೋಪದಿಂದ ಮಾತಾಡಿದಲ್ಲಿ ಮನಸಿನ ಹಿಡಿತವು ತಪ್ಪುತ್ತದೆ ಆಗ ಅ ಮನುಷ್ಯನು ಮತ್ತೆ ಕೋಪದಿಂದ ವರ್ತಿಸಬಹುದು.

ನಿಮಗೆ ಒಂದು ಉದಾಹರಣೆಯೆಂದರೆ ಒಂದು ಸಲ ದಿವಸ ಒಬ್ಬ ವಿದ್ಯಾರ್ಥಿಯು ತನ್ನ ಗುರುಗಳ ಹತ್ತಿರ ಕೇಳುತ್ತಾನೆ ನನಗೆ ನಿಮ್ಮ ತರಹ ಗುರು ಆಗಲು ಎಸ್ಟು ದಿನಗಳು ಬೇಕಾದಿತು ಅಂತ ಕೇಳಿದ ಆಗ ಗುರುಗಳು ಹೇಳುತ್ತಾರೆ ನೀನು ನಿನ್ನ ವಿದ್ಯಾಭ್ಯಾಸವನ್ನು ಮುಗಿಸಿ ನೀನು ಯಾವ ವಿಷಯವನ್ನು ಬೋದಿಸಬೇಕೋ ಆ ವಿಷಯದಲ್ಲಿ ನೀನು ಪ್ರವೀಣನಾಗಬೇಕು ಎಂದು ತಿಳಿಸಿದರು. ಆಗ ಆ ವಿದ್ಯಾರ್ಥಿಯು ಗುರುಗಳಿಗೆ ಮತ್ತೆ ಕೇಳುತ್ತಾನೆ ನಾನು ಅದನ್ನೆಲ್ಲ ಆದಸ್ಟು ಬೇಗನೆ ಕಲಿತು ಪ್ರವೀಣನಾಗುತ್ತೇನೆ ನನಗೆ ಬೇಗನೆ ತಿಳಿಸಿಕೊಡಿ ಅಂದನು ಆಗ ಗುರುಗಳು ಶಿಷ್ಯನಿಗೆ ಬುದ್ದಿವಾದವನ್ನು ಹೇಳುತ್ತಾರೆ ನೀನು ಯಾವುದನ್ನೆಯಾಗಲಿ ನಿಧಾನವಾಗಿ ಕಲಿಯಬೇಕು ಅವಸರದಿಂದ ಕಲಿಯಬಾರದು ಅನ್ನುತಾರೆ. ಆಗತಿಳಿಯುತ್ತದೆ. ಕಲಿಕೆಯಲ್ಲೂ ಮಾತ್ರವಲ್ಲ ನಮ್ಮ ಪ್ರತಿನಿತ್ಯದ ಎಲ್ಲಾ ಕೆಲಸ ಕಾರ್ಯಗಳಲ್ಲಿ ಕೂಡ ನಿಧಾನ ಅಂದರೆ ತಾಳ್ಮೆಯು ಎಷ್ಟು ಅವಶ್ಯ ಅಲ್ಲವೇ.

– ಗಿರೀಶ್ ಎ.ಎನ್., ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.

# ಧಾರವಾಡ ಸೌಹಾರ್ದ ಸಹಕಾರಿಯ ವಿನೂತನ ಯೋಜನೆ ಸೀರೆಗಳನ್ನು ಅಡವಿಟ್ಟು ಸಾಲ ಸೌಲಭ್ಯ

## ನೇಕಾರರತ್ತ ಸಹಾಯಹಸ್ತ ಚಾಚಿದ ಸಹಕಾರಿ





ಕಷ್ಟಪಟ್ಟು ನೂರಾರು ತೊಂದರೆಗಳ ಮಧ್ಯೆ ಸೀರೆ ನೇಯ್ಯುವ ನೇಕಾರರು ಸೀಜನ್ ಸಂದರ್ಭದಲ್ಲಿ ಅವುಗಳನ್ನು ಸೂಕ್ತ ಬೆಲೆಗೆ ಮಾರಾಟ ಮಾಡುವ ಬದಲಾಗಿ ಹಣಕಾಸಿನ ಅಡಚಣೆಗೆ ಬಿದ್ದು ಅತ್ಯಂತ ಕಡಿಮೆ ಬೆಲೆಗೆ ಮಧ್ಯಮರ್ತಿಗಳಿಗೆ ಮಾರಾಟ ಮಾಡುವ ಪರಿಪಾತ ನೇಕಾರರ ವಲಯದಲ್ಲಿ ಸರ್ವೇಸಾಮಾನ್ಯವಾಗಿದೆ.

ಬಡ ನೇಕಾರರ ಈ ಸಮಸ್ಯೆಯ ನಿವಾರಣೆಗೆ ಮುಂದಾಗಿರುವ ಇಲ್ಲಿಯ ಧಾರವಾಡ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ನೇಕಾರರ ಆರ್ಥಿಕ ಸಮಸ್ಯೆಗೆ ಸ್ಪಂದಿಸುವ ನಿಟ್ಟಿನಲ್ಲಿ ಸಿದ್ಧವಾದ ಸೀರೆಗಳನ್ನು ಅಡವಿಟ್ಟುಕೊಂಡು ಸಾಲ ನೀಡುವ ವಿನೂತನ ಯೋಜನೆಯನ್ನು ಜಾರಿಗೊಳಿಸಿದೆ.

ಹುಬ್ಬಳ್ಳಿಯಲ್ಲಿ ದೇಶದ ಮೊದಲ ಸೀರೆ ಬ್ಯಾಂಕ್ ಚಿನ್ನ, ವಜ್ರ, ಸ್ಥಿರಾಸ್ತಿಗಳನ್ನು ಅಡವಿಟ್ಟು ಸಾಲ ನೀಡುವುದು ಬ್ಯಾಂಕಿಂಗ್ ಕ್ಷೇತ್ರದ ಹಳೆಯ ಜಮಾನಾ. ಚಿನ್ನಾಭರಣಗಳನ್ನು ಸೇಫ್ಟಿ ಲಾಕರ್‌ನಲ್ಲಿ ಇಡುವುದು ಸಾಂಪ್ರದಾಯಿಕ ಬ್ಯಾಂಕಿಂಗ್ ಕ್ಷೇತ್ರದ ಭಾಗ. ಆದರೀಗ ದೇಶದಲ್ಲೇ ಮೊಟ್ಟ ಮೊದಲ ಸೀರೆ ನಿಯಮಿತ  ಹುಬ್ಬಳ್ಳಿಯಲ್ಲಿ ಆರಂಭವಾಗಿದೆ. ಹೌದು... ನೇಕಾರರು ತಮ್ಮ ಸೀರೆಗಳನ್ನು ನೇಯ್ದು ಬಳಿಕ ಸೀಸನ್ ಬರುವವರೆಗೆ ಬ್ಯಾಂಕ್‌ನಲ್ಲಿ ಇರಿಸಬಹುದು.

ಧಾರವಾಡ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ಸಹಕಾರಿಯಲ್ಲಿ ವಿನೂತನ ಯೋಜನೆಯನ್ನು ತನ್ನ ಹಳೇ ಹುಬ್ಬಳ್ಳಿಯ ಶಾಖೆಯಲ್ಲಿ ಜಾರಿಗೊಳಿಸಿದೆ. ಆರಂಭಗೊಂಡ 20 ದಿನಗಳಲ್ಲೇ 300 ರೇಷ್ಮೆ ಸೀರೆಗಳನ್ನು ನೇಕಾರರು ಬ್ಯಾಂಕ್‌ನ ತಮ್ಮ ಅಕೌಂಟ್‌ನಲ್ಲಿ ಶೇಖರಿಸಿ ಇರಿಸಿದ್ದಾರೆ. ಈ ಸೀರೆಗಳ ಮೇಲೆ 2.50ಲಕ್ಷ ರೂ.ಗಳನ್ನು ಬ್ಯಾಂಕ್‌ಸಾಲ ನೀಡಿದೆ.

**ನೇಕಾರರಿಂದ ನೇಕಾರರಿಗೆ :** ಈ ಯೋಜನೆ ನೇಕಾರರಿಗೆ ಮಾತ್ರ ಅನ್ವಯ. ಯಾವುದೇ ಸೀರೆ ವ್ಯಾಪಾರಿಗಳು ಯೋಜನೆ ವ್ಯಾಪ್ತಿಗೆ ಒಳಪಡರು. ಧಾರವಾಡ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರ ಬ್ಯಾಂಕ್‌ನ ಅಧ್ಯಕ್ಷ ಚಂದ್ರಕಾಂತ ಪಡಚಣ್ಣವರ ಕನಸಿನ ಕೂಸಿದು. ಇವರು ಸ್ವತಃ ನೇಕಾರ ಕುಟುಂಬಕ್ಕೆ ಸೇರಿದವರು. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದರೂ ನೇಕಾರರ ಬವಣೆಗೊತ್ತಿರುವುದರಿಂದ ಇಂತಹದೊಂದು ಹೊಸ ಪ್ರಯೋಗಕ್ಕೆ ಮುಂದಾಗಿದ್ದಾರೆ. ಆರಂಭಿಕವಾಗಿ ಹುಬ್ಬಳ್ಳಿ ಶಾಖೆಯಲ್ಲಿ ಮಾತ್ರ ಯೋಜನೆ ಅನುಷ್ಠಾನಗೊಂಡಿದ್ದು, ಉತ್ತಮ ಪ್ರತಿಕ್ರಿಯೆ ದೊರಕಿದೆ. ಗದಗ ಹಾಗೂ ಹಾವೇರಿ ಜಿಲ್ಲೆಗಳಿಂದಲೂ ಯೋಜನೆಗೆ ಉತ್ಸಾಹ ಕಂಡುಬಂದಿದ್ದು, ಶೀಘ್ರ ವಿಸ್ತರಿಸುವ ಗುರಿ ಹೊಂದಲಾಗಿದೆ ಎನ್ನುತ್ತಾರೆ ಅವರು.

### ಪರಿವರ್ತನೆ

ಸ್ವಯಂ ಪರಿವರ್ತನೆಯಿಂದ
ವಿಶ್ವ ಪರಿವರ್ತನೆ ಯಾಗಲಿ ॥

ಶಿಕ್ಷಣದ ಪರಿವರ್ತನೆಯ ಹಾದಿಯಲ್ಲಿ
ಸಾಮಾಜಿಕ ಪರಿವರ್ತನೆ ಯಾಗಲಿ ॥

ಜನರ ಮನ ಪರಿವರ್ತನೆಯಿಂದ ॥
ಸಮಾಜದ ಪರಿವರ್ತನೆಯಾಗಲಿ

ಸುಶಿಕ್ಷಿತರಿಂದ ಜನ ಪರಿವರ್ತನೆಯಿಂದ
ಸಹಕಾರ ರಂಗ ಪರಿವರ್ತಿಸಲಿ ॥

ಸೌಹಾರ್ದ ಸಹಕಾರಿಯ ಜೊತೆ ಪರಿವರ್ತನೆಯೇ
ಸ್ವಯಂ ಪರಿವರ್ತನೆಯೇ ನಮ್ಮ ಧ್ಯೇಯವಾಗಲಿ॥

**– ಸವಿತ ಎನ್.ಇ.**



**ಶ್ರೀ ಶ್ರೀಧರಪ್ಪ ರುದ್ರಪ್ಪ ತಾಳಿಕೋಟಿ**

### ನಿಧನ

ಹಿರಿಯ ಸಹಕಾರಿ ಹಾಗೂ
ಸಂಯುಕ್ತ ಸಹಕಾರಿಯ ಮಾಜಿ
ನಿರ್ದೇಶಕರಾದ

**ಶ್ರೀ ಶ್ರೀಧರಪ್ಪ ರುದ್ರಪ್ಪ ತಾಳಿಕೋಟಿ**

ಅವರು 27–10–2012ರಂದು
ದೈವಾದೀನರಾಗಿದ್ದು, ಶ್ರೀಯುತರ
ಆತ್ಮಕ್ಕೆ ಶಾಂತಿ ಸಿಗಲೆಂದು
ಸಂತಾಪ ಕೋರಲಾಗಿದೆ.

# ದೇಶದ ಸಹಕಾರ ಕ್ಷೇತ್ರದ ಮಾಹಿತಿಗೊಂದು ವೆಬ್‌ತಾಣ

## http://www.ncui.coop



ರಘುನಂದನ ಕೆ.
ಸಹಪ್ರಧಾನ ವ್ಯವಸ್ಥಾಪಕ,
ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.

http://www.ncui.coop

ಭಾರತದ ಸಂವಿಧಾನದಲ್ಲಿ ಸಹಕಾರ ವಿಷಯವು ರಾಜ್ಯಪಟ್ಟಿಯ ವಿಷಯವಾಗಿರುವ ಕಾರಣ ಎಲ್ಲ ರಾಜ್ಯಗಳು ತಮ್ಮದೇ ಆದ ಸಹಕಾರ ಕಾಯ್ದೆಗಳನ್ನು ಹೊಂದಿವೆ. ಕರ್ನಾಟಕದಲ್ಲಿ ಸೌಹಾರ್ದ ಸಹಕಾರ ಕಾಯ್ದೆ ಇರುವಂತೆ ಕೆಲವು ರಾಜ್ಯಗಳಲ್ಲಿ ಸ್ವತಂತ್ರ ಸಹಕಾರ ಕಾಯ್ದೆ ಕೂಡ ಜಾರಿಯಲ್ಲಿದೆ. ಅಲ್ಲದೆ ರಾಜ್ಯಮಟ್ಟಕ್ಕಿಂತ ಹೆಚ್ಚಿನ ಕಾರ್ಯವ್ಯಾಪ್ತಿಯ ಉದ್ದೇಶವಿಟ್ಟುಕೊಂಡ ಸಹಕಾರ ಸಂಸ್ಥೆಗಳನ್ನು ರಚಿಸಲು ಅವಕಾಶವಾಗುವಂತೆ ಮಲ್ಟಿಸ್ಟೇಟ್ ಕೋ ಆಪರೇಟೀವ್ ಆಕ್ಟ್ 2002 ಕೂಡ ಜಾರಿಯಲ್ಲಿದೆ. ಒಟ್ಟಿನಲ್ಲಿ ಸಹಕಾರ ಚಳುವಳಿ ಭಾರತದಲ್ಲಿ ವಿಶಾಲವಾಗಿ ವಿಕೇಂದ್ರೀಕೃತವಾಗಿ ವೈಶಿಷ್ಟ್ಯಪೂರ್ಣತೆಯೊಂದಿಗೆ ಜಾರಿಯಲ್ಲಿದೆ. ದೇಶದ ಎಲ್ಲ ಭಾಗಗಳ, ಅದರಲ್ಲೂ ಮುಖ್ಯವಾಗಿ ಗ್ರಾಮೀಣ ಭಾಗದ ಜನರ ಹಾಗೂ ಮಹಿಳೆಯರ ಆರ್ಥಿಕ ಅಭಿವೃದ್ಧಿಗಾಗಿ ಹಾಗೂ ಸ್ವಾವಲಂಬನೆಯ ಮಾರ್ಗವಾಗಿ ಕಾರ್ಯನಿರ್ವಹಿಸುತ್ತಿರುವುದು ಸಹಕಾರ ಕ್ಷೇತ್ರ.

1929ರಲ್ಲಿ ಸ್ಥಾಪಿಸಲ್ಪಟ್ಟ ನ್ಯಾಷನಲ್ ಕೋ–ಆಪರೇಟೀವ್ ಯೂನಿಯನ್ ಆಫ್ ಇಂಡಿಯಾ (NCUI) ಇದು ಭಾರತದ ಸಹಕಾರ ಚಳುವಳಿಯನ್ನು ಪ್ರತಿನಿಧಿಸುವ ಅಪೆಕ್ಸ್ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ. ಇದರ ಕೇಂದ್ರ ಕಛೇರಿ ದೆಹಲಿಯಲ್ಲಿದೆ. ಭಾರತದಲ್ಲಿ ಸಹಕಾರ ಚಳುವಳಿಯ ಪ್ರಚಾರ ಮತ್ತು ಅಭಿವೃದ್ಧಿ, ಸಹಕಾರ ತತ್ವಗಳ ಬಗ್ಗೆ ಅರಿವುಂಟು ಮಾಡುವುದು, ಸಹಕಾರ ಕ್ಷೇತ್ರದ ವಿಸ್ತರಣೆಗೆ ಅಗತ್ಯವೆನಿಸುವ ಶಿಕ್ಷಣ ಮಾರ್ಗದರ್ಶನ ಒದಗಿಸುವುದು, ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತದ ಸಹಕಾರ ಚಳುವಳಿಯನ್ನು ಪ್ರಚುರಪಡಿಸುವುದು ಮತ್ತು ಪ್ರತಿನಿಧಿಸುವುದು ಇದರ ಉದ್ದೇಶವಾಗಿದೆ. ಈ ಸಂಚಿಕೆಯಲ್ಲಿ ಎನ್‌ಸಿಯುಐ (NCUI)ನ ವೆಬ್‌ತಾಣದ ಪರಿಚಯ ಮಾಡಿಕೊಡಲಾಗಿದೆ.

**ವೆಬ್‌ತಾಣ 06 : http://www.ncui.coop**

- ಈ ವೆಬ್‌ತಾಣದಲ್ಲಿ ಸಹಕಾರದ ವ್ಯಾಖ್ಯೆ, ವಿಶ್ವದಲ್ಲಿ ಸಹಕಾರ ಚಳುವಳಿಯ ಇತಿಹಾಸ, ಭಾರತದಲ್ಲಿ ಸಹಕಾರ ಚಳುವಳಿ ನಡೆದುಬಂದ ದಾರಿ, ಸಹಕಾರ ತತ್ವಗಳ ಪರಿಚಯವನ್ನು ವಿವರವಾಗಿ ನೋಡಬಹುದು. ಅಲ್ಲದೆ ಭಾರತದ ಸಹಕಾರ ಕ್ಷೇತ್ರದ ಕಿರು ಪರಿಚಯ ಅಂದರೆ, ಸಹಕಾರ ಸಂಸ್ಥೆಗಳ ಸಂಖ್ಯೆ, ಸದಸ್ಯರ ಸಂಖ್ಯೆ, ಷೇರು ಬಂಡವಾಳ, ದುಡಿಯುವ ಬಂಡವಾಳ, ಠೇವಣಿ ಹಾಗೂ ನಿಧಿಗಳ ವಿವರ, ಭಾರತದ ಆರ್ಥಿಕತೆಯಲ್ಲಿ ಸಹಕಾರ ಕ್ಷೇತ್ರದ ಕೊಡುಗೆ ಇತ್ಯಾದಿಗಳನ್ನು ಅಂಕಿ ಅಂಶಗಳ ವಿವರಗಳೊಂದಿಗೆ ತಿಳಿಯಬಹುದಾಗಿದೆ.
- ಭಾರತದ ಎಲ್ಲ ರಾಜ್ಯಗಳ ಸಹಕಾರ ಮಂತ್ರಿಗಳ ಹಾಗೂ ರಾಜ್ಯ ಸರ್ಕಾರದ ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ




ಹೆಸರು, ಕಛೇರಿ ದೂರವಾಣಿ ಸಂಖ್ಯೆ ಹಾಗೂ ಮೊಬೈಲ್ ಸಂಖ್ಯೆಗಳನ್ನು ಈ ವೆಬ್‌ತಾಣದಿಂದ ಪಡೆಯಬಹುದು. ಅಲ್ಲದೆ, ಎಲ್ಲ ರಾಜ್ಯದ ಸಹಕಾರ ಇಲಾಖೆಯ ನಿಬಂಧಕರ ಹೆಸರು ಹಾಗೂ ಸಂಪರ್ಕ ಸಂಖ್ಯೆಗಳನ್ನು ಕೂಡ ಪಡೆಯಬಹುದು.

- ಈ ವೆಬ್‌ತಾಣದಲ್ಲಿ NCUI – ನ್ಯಾಷನಲ್ ಕೋ–ಆಪರೇಟೀವ್ ಯೂನಿಯನ್ ಆಫ್ ಇಂಡಿಯಾ ಇದರ ರಚನೆ, ಉದ್ದೇಶ, ಕಾರ್ಯ ಚಟುವಟಿಕೆ, ಆಡಳಿತ ನಿರ್ವಹಣೆಯ ವಿವರ, ಆಡಳಿತ ಮಂಡಳಿಯ ಮಾಹಿತಿಗಳನ್ನು ನೋಡಬಹುದು. ಇದರ ಅಧ್ಯಕ್ಷರ ಹಾಗೂ ಮುಖ್ಯ ವ್ಯವಸ್ಥಾಪಕರ ಕಿರು ಪರಿಚಯವನ್ನು ಹಾಗೂ ಇದರ ಉಪವಿಧಿಯನ್ನು ಕೂಡ ಅರಿಯಬಹುದು.
- ನ್ಯಾಷನಲ್ ಕೋ–ಆಪರೇಟೀವ್ ಯೂನಿಯನ್ ಆಫ್ ಇಂಡಿಯಾ ಇದರ 208 ಸದಸ್ಯ ಸಂಸ್ಥೆಗಳ ವಿವರ, ರಾಷ್ಟ್ರ ಮಟ್ಟದ, ಬಹು ರಾಜ್ಯ ಮಟ್ಟದ, ರಾಜ್ಯ ಮಟ್ಟದ ಹಾಗೂ ವಿಭಾಗೀಯ ಮಟ್ಟದ, ವಿವಧ ಕ್ಷೇತ್ರವಾರು ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಸ್ಥೆಗಳ ವಿಳಾಸ ಹಾಗೂ ಸಂಪರ್ಕ ಸಂಖ್ಯೆಗಳನ್ನು ಈ ವೆಬ್‌ತಾಣದಿಂದ ಪಡೆಯಬಹುದು.
- ಬಹುರಾಜ್ಯ ಸಹಕಾರ ಸಂಘಗಳ ಕಾಯ್ದೆ 2002 ಹಾಗೂ ನಿಯಮಗಳು, ರಾಷ್ಟ್ರಮಟ್ಟದ, ಬಹುರಾಜ್ಯ ಹಾಗೂ ಫೆಡರಲ್ ಸಂಸ್ಥೆಗಳ ಮಾದರಿ ಉಪವಿಧಿ, ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ಸಂವಿಧಾನದ 97ನೇ ತಿದ್ದುಪಡಿಯ ಮಾಹಿತಿ, 59ನೇ ಅಖಿಲ ಭಾರತೀಯ ಸಹಕಾರ ಸಪ್ತಾಹದ ವಿವರಗಳನ್ನು ನೋಡಬಹುದು.
- ಸಹಕಾರ ಕ್ಷೇತ್ರದ ವಿವಿಧ ಸಾಹಸಗಾಥೆಗಳನ್ನು, ನ್ಯಾಷನಲ್ ಕೋ–ಆಪರೇಟೀವ್ ಯೂನಿಯನ್ ಆಫ್ ಇಂಡಿಯಾದ ಪ್ರಕಟಣೆಗಳನ್ನು, ಪತ್ರಿಕಾ ಹೇಳಿಕೆಗಳನ್ನು, ಸಂದರ್ಶನಗಳು, ಭಾಷಣಗಳನ್ನು

16ನೇ ಪುಟಕ್ಕೆ...

# ಶಿರ್ವದಲ್ಲಿ ಸರಸ್ವತಿ ಸೌಹಾರ್ದ ಸಹಕಾರಿ 9ನೇ ಶಾಖೆ ಉದ್ಘಾಟನೆ




ಶ್ರೀ ಸರಸ್ವತಿ ಸೌಹಾರ್ದ ಸಹಕಾರಿಯ 9ನೇ ಶಾಖೆ ಶ್ವೇತ ಕ್ರಾಂತಿಯ ಹರಿಕಾರ ದಿ ವರ್ಗೀಸ ಕುರಿಯನರವರಿಗೆ ಸಮರ್ಪಣೆ.

ಉಡುಪಿ, ಸೆ.30 : ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ (ನಿ) 9ನೇ ಶಾಖೆ ಶಿರ್ವದ ಮುಖ್ಯಪೇಟೆ ಕಟ್ಟಡದಲ್ಲಿ ರವಿವಾರ ಉದ್ಘಾಟನೆಗೊಂಡಿತು. ಶ್ರೀನಿವಾಸ ಪೂಜಾರಿ ಶಾಖೆ ಉದ್ಘಾಟಿಸಿ ಮಾತನಾಡಿ, ಸಹಕಾರಿ ಚಿಂತನೆ ಬೆಳೆಸಿಕೊಂಡು ಪಾರದರ್ಶಕ ನೀತಿ, ಪ್ರಾಮಾಣಿಕ, ಪ್ರೀತಿ, ವಿಶ್ವಾಸ, ಸಮರ್ಪಣಾ ಮನೋಭಾವದಿಂದ ಸಹಕಾರಿಯಲ್ಲಿ ತೊಡಗಿಸಿ ಗೊಂಡಲ್ಲಿ ಯಶಸ್ಸು ಸಾಧ್ಯ ಎಂದರು.

ಹೈನುಗಾರಿಕೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ 2009ರಿಂದ ಈವರೆಗೆ ಹಾಲು ಉತ್ಪಾದನೆಯಲ್ಲಿ ತೊಡಗಿಕೊಂಡಿರುವ 7 ಲಕ್ಷ ಮಹಿಳೆಯರಿಗೆ 1,1169 ಕೋಟಿ ರೂ. ಬಿಡುಗಡೆ ಮಾಡಿದೆ ಎಂದರು.

ಇ–ಸ್ಟಾಂಪಿಂಗ್, ಸೇಫ್ ಲಾಕರ್ ವ್ಯವಸ್ಥೆಯನ್ನು ಕೂಡ ಉದ್ಘಾಟಿಸಿದ ಸಚಿವರು ಕ್ಷೀರಕ್ರಾಂತಿಯ ಹರಿಕಾರ ದಿ. ವರ್ಗೀಸ್ ಕುರಿಯನ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆಗೈದರು. ಕಾಪು ಶಾಸಕ ಲಾಲಾಜಿ ಆರ್.ಮೆಂಡನ್ ಅಧ್ಯಕ್ಷತೆ ವಹಿಸಿದ್ದರು. ಬಂಟಕಲ್ಲು ರಾಜಾಪುರ ಸಾರಸ್ವರ ಸಂಘದ ಅಧ್ಯಕ್ಷ ಹಾಗೂ ಜಿಲ್ಲಾ ಪಂಚಾಯಿತಿ ಸ್ಥಾಯಿ ಸಮಿತಿ ಅಧ್ಯಕ್ಷ ಉಪೇಂದ್ರ ನಾಯಕ್, ಶಿರ್ವ ಆರೋಗ್ಯಮಾತೆ ದೇವಾಲಯದ ರೆಫಾ। ಸ್ಟಾನಿತಾವ್ರೋ, ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕ ಭಾಸ್ಕರ ಕಾಮತ್, ಶಿರ್ವ ಗ್ರಾಮಪಂಚಾಯಿತಿ ಅಧ್ಯಕ್ಷ ವನಿತಾ ಕಮಲಾಕ್ಷ ಶೆಣೈ, ಬಂಟಕಲ್ಲು ಶ್ರೀದುರ್ಗಾಪರಮೇಶ್ವರಿ ದೇವಸ್ಥಾನದ ಆಡಳಿತ ಮೊಕ್ತೇಸರ ಪಿ.ಪಿ.ವಿಶ್ವನಾಥ ನಾಯಕ್ ಬೆಳ್ಪತ್ರೆ, ಪಳ್ಳಿ–ಅಡಪಾಡಿಯ ಶ್ರೀ ಉಮಾಮಹೇಶ್ವರಿ ದುರ್ಗಾಪರಮೇಶ್ವರಿ ದೇವಸ್ಥಾನದ ಧರ್ಮದರ್ಶಿ ಪುಂಡಲೀಕ ನಾಯಕ್, ಉದ್ಯಮಿ ಪ್ರಕಾಶ್ ಶೆಟ್ಟಿ ಶಿರ್ವ, ಕಟ್ಟಡದ ಮಾಲೀಕ ಪ್ರಸನ್ನ ಕುಮಾರ್, ಶಾಖಾ ವ್ಯವಸ್ಥಾಪಕ ಚೇತನ್ ಕುಮಾರ್, ಪ್ರಧಾನ ವ್ಯವಸ್ಥಾಪಕ ವಸಂತ ಎ.ಉಪಸ್ಥಿತರಿದ್ದರು.

ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಅಧ್ಯಕ್ಷ ಎಸ್.ಆರ್.ಸತೀಶ್ಚಂದ್ರ ಪ್ರಸ್ತಾವನೆಗೈದು ಸ್ವಾಗತಿಸಿದರು. ಶಾಖೆ ಉಪಪ್ರಧಾನ ವ್ಯವಸ್ಥಾಪಕಿ ಭವಾನಿ ಮತ್ತು ಮಾತೇಶ್ ಭಂಡಾರಿ ಕಾರ್ಯಕ್ರಮ ನಿರೂಪಿಸಿದರು. ಸಂಸ್ಥೆಯ ಉಪಾಧ್ಯಕ್ಷ ವಿನಯ್‌ಕುಮಾರ್ ಕಂದಡ್ಕ ವಂದಿಸಿದರು.

## ರೈತರ ಸಾಲಮನ್ನಾಕ್ಕೆ 3,052 ಕೋಟಿ ರೂ.

ಬದುಕಿನ ಜೀವನಾಡಿಯಾಗಿರುವ ರೈತನ ಬದುಕು ಅತಂತ್ರವಾಗಬಾರದು ಎನ್ನುವ ದೃಷ್ಟಿಕೋನವಿಟ್ಟುಕೊಂಡು ರಾಜ್ಯದ 16 ಲಕ್ಷ ರೈತರಿಗೆ ಅನ್ವಯವಾಗುವಂತೆ ತಲಾ 25 ಸಾವಿರ ರೂ.ನಂತೆ ಸಾಲಬಡ್ಡಿ ಮನ್ನಾ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲಾಗಿದೆ. ಇದಕ್ಕಾಗಿ ರಾಜ್ಯ ಸರ್ಕಾರ 3,052 ಕೋಟಿ ರೂ.ವಿಶೇಷ ಅನುದಾನವನ್ನು ಮೀಸಲಿರಿಸಿದೆ ಎಂದು ಸಚಿವ ಪೂಜಾರಿ ಹೇಳಿದರು.

## ದೇಶದ ಸಹಕಾರ ಕ್ಷೇತ್ರದ ಮಾಹಿತಿಗೊಂದು ವೆಬ್‌ತಾಣ http://www.ncui.coop

...14ನೇ ಪುಟದಿಂದ

ನೋಡಬಹುದು. ಅಲ್ಲದೆ, NCUIನ ವಾರ್ಷಿಕ ವರದಿಗಳನ್ನು, ಲೆಕ್ಕಪರಿಶೋಧನಾ ವರದಿಗಳನ್ನು ಕೂಡ ನೋಡಬಹುದಾಗಿದೆ.

- ನ್ಯಾಷನಲ್ ಕೋ-ಆಪರೇಟೀವ್ ಯೂನಿಯನ್ ಆಫ್ ಇಂಡಿಯಾದ ಬೇರೆ ಬೇರೆ ವಿಭಾಗ ಅಂದರೆ ಹಣಕಾಸು, ಶೈಕ್ಷಣಿಕ, ಪ್ರಕಟಣೆ, ಮಾನವ ಸಂಪನ್ಮೂಲ ಅಭಿವೃದ್ಧಿ ಇತ್ಯಾದಿ ವಿಭಾಗಗಳ ಮಾಹಿತಿ, NCUIನ ಸದಸ್ಯತ್ವ ಪಡೆಯುವ ವಿವರಗಳನ್ನು ಅರಿಯಬಹುದಾಗಿದೆ.
- ನ್ಯಾಷನಲ್ ಕೋ-ಆಪರೇಟೀವ್ ಯೂನಿಯನ್ ಆಫ್ ಇಂಡಿಯಾದ "ಯಂಗ್ ಸ್ಕಾಲರ್ ಸ್ಕೀಮ್" ಎನ್ನುವ ವಿದ್ಯಾರ್ಥಿಗಳಿಗೆ ಸ್ಕಾಲರ್ ಷಿಫ್ ಒದಗಿಸುವ ಸ್ಕೀಮಿನ ವಿವರಗಳು, ಇದರ ಆಯ್ಕೆಯ ಮಾನದಂಡಗಳು, ಅರ್ಹತೆ ಹಾಗೂ ತರಬೇತಿಯ ಮಾಹಿತಿಯನ್ನು ತಿಳಿಯುವುದರೊಂದಿಗೆ ಯುವಜನತೆಯನ್ನು ಭಾಗವಹಿಸಲು ಮಾರ್ಗದರ್ಶನ ಮಾಡಬಹುದಾಗಿದೆ.
- ನ್ಯಾಷನಲ್ ಕೋ-ಆಪರೇಟೀವ್ ಯೂನಿಯನ್ ಆಫ್ ಇಂಡಿಯಾ ಇದು "ಸಹಕಾರ ಶಿಕ್ಷಣ ನಿಧಿ"ಯನ್ನು ನಿರ್ವಹಿಸುತ್ತಿದ್ದು ಈ ನಿಧಿಯ ಉದ್ದೇಶ, ಅದರ ಬಳಕೆಯ ವಿವರಗಳು, ಅನುಮೋದಿಸಲ್ಪಟ್ಟ ಕಾರ್ಯ ಚಟುವಟಿಕೆಗಳು ಇತ್ಯಾದಿಗಳನ್ನು ಈ ವೆಬ್‌ತಾಣ ತಿಳಿಯಪಡಿಸುತ್ತದೆ.
- 1958ರಲ್ಲಿ NCUI ಇದು "ನ್ಯಾಷನಲ್ ಸೆಂಟರ್ ಫಾರ್ ಕೋ-ಆಪರೇಟೀವ್ ಎಜುಕೇಷನ್ & ಟ್ರೈನಿಂಗ್" (NCCE) ಎನ್ನುವ ಪ್ರತ್ಯೇಕ ವಿಭಾಗವನ್ನು ಕೇಂದ್ರ ಕಛೇರಿಯಾದ ದೆಹಲಿಯಲ್ಲಿ ಆರಂಭಿಸಿದ್ದು ಇದು ಸಹಕಾರ ಸಂಸ್ಥೆಯ ನಿರ್ದೇಶಕರುಗಳು ಹಾಗೂ ಸಿಬ್ಬಂದಿಗಳಿಗಾಗಿ ತರಬೇತಿಯನ್ನು ಒದಗಿಸುತ್ತದೆ. ಈ ವಿಭಾಗದ ಉದ್ದೇಶ, ತರಬೇತಿ ಕಾರ್ಯಕ್ರಮಗಳ ವಿವರ, ಭಾಗವಹಿಸಿದವರಿಗೆ ಒದಗಿಸುವ ಸೌಲಭ್ಯಗಳ ವಿವರ, ತರಬೇತಿ ವಿಷಯ ಹಾಗೂ ತರಬೇತಿಗೆ ಸಂಬಂಧಿಸಿದ ಪ್ರಕಟಣೆಗಳನ್ನು ಈ ತಾಣದಲ್ಲಿ ನೋಡಬಹುದು.

ಈ ವೆಬ್‌ತಾಣವನ್ನು ಕನ್ನಡ ಹಾಗೂ ಹಿಂದಿಯೂ ಸೇರಿದಂತೆ ವಿಶ್ವದ ವಿವಿಧ ಭಾಷೆಗಳಲ್ಲೂ ನೋಡಬಹುದು. ಸಹಕಾರ ಚಳುವಳಿ ಇದು ಜನರ ಚಳುವಳಿ, ಬನ್ನಿ ಭಾಗವಹಿಸಿ, ಸಹಕಾರ ಕ್ಷೇತ್ರದ ಮೂಲಕ ಸದೃಢ ದೇಶವನ್ನು ಕಟ್ಟೋಣ ಎನ್ನುವ ಘೋಷವಾಕ್ಯದೊಂದಿಗೆ ಕಾರ್ಯನಿರ್ವಹಿಸುತ್ತಿರುವ ನ್ಯಾಷನಲ್ ಕೋ-ಆಪರೇಟೀವ್ ಯೂನಿಯನ್ ಆಫ್ ಇಂಡಿಯಾ ಇದು ಭಾರತದ ಸಹಕಾರ ಕ್ಷೇತ್ರವನ್ನು ಪೂರ್ಣ ಪ್ರಮಾಣದಲ್ಲಲ್ಲದಿದ್ದರೂ ರಾಷ್ಟ್ರಮಟ್ಟದಲ್ಲಿ ಪ್ರತಿನಿಧಿಸುವ ಕೆಲಸ ಮಾಡುತ್ತಿದೆಯೆನ್ನಬಹುದು. ಭಾರತದ ಸಹಕಾರ ಕ್ಷೇತ್ರದ ಕುರಿತು ಅರಿವನ್ನು ಪಡೆಯಲು ಹಾಗೂ ತರಬೇತಿ ವಿವರಗಳ ಮಾಹಿತಿಯನ್ನು ಪಡೆಯಲು ಈ ವೆಬ್‌ತಾಣವನ್ನು ಆಗಾಗ್ಗೆ ಸಂದರ್ಶಿಸುತ್ತಿರಬಹುದಾಗಿದೆ.

## ಸಹಕಾರಿಗಳ ಸಿಬ್ಬಂದಿಯವರಿಗಾಗಿ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮ

...3ನೇ ಪುಟದಿಂದ

ಪ್ರತಿಯೊಬ್ಬ ನಾಗರೀಕರು ಸಹ ದೀನ ದಲಿತರ ಅಭಿವೃದ್ಧಿಯಲ್ಲಿ ಪಾಲ್ಗೊಳ ಬೇಕು ಎಂದು ಕರೆನೀಡಿದರು. ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಕರ್ನಾಟಕ ಸಹಕಾರ ತರಬೇತಿ ಕೇಂದ್ರ ಮೂಡಬಿದ್ರೆ ಇದರ ಪ್ರಾಂಶುಪಾಲರಾದ ಶ್ರೀಮತಿ ಎಂ.ಎಂ. ಶ್ಯಾಮಲ, ದಕ್ಷಿಣಕನ್ನಡ ಜಿಲ್ಲಾ ಸಹಕಾರಿ ಯೂನಿಯನ್ ಮಂಗಳೂರು ಇದರ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಾದ ಶ್ರೀಮತಿ ಸಾವಿತ್ರಿ ರೈ, ನಾಗರೀಕ ಸೇವಾ ಟ್ರಸ್ಟ್‌ನ ಶ್ರೀಮತಿ ವಿದ್ಯಾ, ಶ್ರೀ ಜಯಪ್ರಕಾಶ್, ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಭಾಸ್ಕರ್ ಹೆಗಡೆ ಮುಂತಾದವರು ಭಾಗವಹಿಸಿದ್ದರು. ಈ ಕಾರ್ಯಕ್ರದಲ್ಲಿ ರಾಜ್ಯದ 16 ಜಿಲ್ಲೆಗಳ 44 ಸೌಹಾರ್ದ ಸಹಕಾರಿಗಳ 50 ಪ್ರತಿನಿಧಿಗಳು ಜೊತೆಗೆ ಸ್ಥಳೀಯ ಸೌಹಾರ್ದ ಸಹಕಾರಿಗಳ ಕೆಲವು ಸಿಬ್ಬಂದಿವರ್ಗದವರು ಭಾಗವಹಿಸಿರುತ್ತಾರೆ. ಕಾರ್ಯಕ್ರಮವು ದಿ: 1 ರಿಂದ 10ರವರೆಗೆ ನಡೆಯುತ್ತದೆ. ವಿವಿಧ ವಿಷಯಗಳ ಜೊತೆಗೆ ಪ್ರಾಯೋಗಿಕ ಕಾರ್ಯಕ್ರಮಗಳನ್ನು ಅಧ್ಯಯನ ಪ್ರವಾಸವನ್ನು ಯೋಗ, ಆರೋಗ್ಯ ತಪಾಸಣೆ ಹಾಗೂ ಮನರಂಜನೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಪ್ರಾಂಭದಲ್ಲಿ ಕುಮಾರಿ ಸುಧಾ ಪ್ರಾರ್ಥನೆಮಾಡಿದರು, ಶ್ರೀಯುತ ವಿ.ಜೆ.ಕಾರಕೂನ್ ಸ್ವಾಗತ ಹಾಗೂ ಪ್ರಾಸ್ತಾವಿಕ ಭಾಷಣ ಮಾಡಿದರು. ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ನಾಗೇಂದ್ರ ಗುಪ್ತರವರು ವಂದನಾರ್ಪಣೆ ಮಾಡಿದರು.

## ನೂತನ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಆಯ್ಕೆ




ಆದರ್ಶ ಅರ್ಬನ್ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ., ಧಾರವಾಡ ನೂತನ ಅಧ್ಯಕ್ಷರಾಗಿ ಪ್ರೊ. ಮಲಿಕಸಾಬ ಎಂ.ಸದಾಪ್ಪ ಮತ್ತು ಉಪಾಧ್ಯಕ್ಷರಾಗಿ ಶ್ರೀ ಶಿವಣ್ಣ ಪಿ. ಗುಡ್ಡದ ಇವರು ಆಯ್ಕೆಯಾಗಿರುತ್ತಾರೆ.




ಜಿಲ್ಲಾ ಜಂಗಮ ಅಭಿವೃದ್ಧಿ ಸೌಹಾರ್ದ ಸಹಕಾರಿಯ ನೂತನ ಅಧ್ಯಕ್ಷರಾಗಿ ಎನ್. ಎಂ. ಬಸವರಾಜಯ್ಯ ಹಾಗೂ ಉಪಾಧ್ಯಕ್ಷರಾಗಿ ಪಿ.ಜಿ.ರಾಜಶೇಖರಯ್ಯ ರವರು ಆಯ್ಕೆಯಾಗಿರುತ್ತಾರೆ.

### ಸಾಗರದ ಮಯೂರ ಸೌಹಾರ್ದ ಸಹಕಾರಿಯಲ್ಲಿ ಸಹಕಾರಿಯ

# ದಶಮಾನೋತ್ಸವದ ಅಂಗವಾಗಿ ಸಹಕಾರ ಕುರಿತು ಸಂವಾದ ಕಾರ್ಯಕ್ರಮ




ದಿನಾಂಕ 25–11–2012ರಂದು ಮಯೂರ ಸೌಹಾರ್ದ ಸಹಕಾರಿಯಲ್ಲಿ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗವ ವಿಭಿನ್ನ ರೀತಿಯ ಮಾದರಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮವನ್ನು ಏರ್ಪಡಿಸಿದ ಉದ್ದೇಶವನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ವೆಂಕಟೇಶರವರು ತಮ್ಮ ಸ್ವಾಗತ ಹಾಗೂ ಪ್ರಾಸ್ತಾವಿಕ ಭಾಷಣದಲ್ಲಿ ಸಹಕಾರಿಗಳಿಗೆ ಅವರ ಮನಸ್ಸಿನಲ್ಲಿ ಸಹಕಾರ ಕ್ಷೇತ್ರದ ಬಗ್ಗೆ ಸಕಾರಾತ್ಮಕ ಒಲವು ಮೂಡಿಸುವ ಹಾಗು ಕೆಲವು ಸಂದೇಹಗಳಿಗೆ ಸ್ಪಂದಿಸುವ ಹಾಗೂ ಸಹಕಾರಿ ಕ್ಷೇತ್ರದ ಪ್ರಸಕ್ತ ಬೆಳವಣಿಗೆಗಳ ಬಗ್ಗೆ ತಿಳುವಳಿಕೆ ಮಾಡಿಸುವ ನಿಟ್ಟಿನಲ್ಲಿ ಮತ್ತು ಸದಸ್ಯರಲ್ಲಿ ಸಹಕಾರಿ ನಿಷ್ಠೆಯನ್ನು ಬೆಳೆಸುವುದಕ್ಕಾಗಿ ಈ ಕಾರ್ಯಕ್ರಮ ಎಂದು ತಿಳಿಸಿದರು.

ಮಯೂರ ಸೌಹಾರ್ದ ಸಹಕಾರಿಯ ಪ್ರಗತಿಯ ಬಗ್ಗೆ ವಿವರಗಳನ್ನು ನೀಡುತ್ತ ಸಹಕಾರಿಯಲ್ಲಿ 31–3–2012ಕ್ಕೆ 100 ಲಕ್ಷ ರೂ.ಗಳ ಶೇರು ಬಂಡವಾಳವಿದೆ. 812 ಲಕ್ಷ ರೂಗಳ ಠೇವಣಿ ಇದೆ. 110.00 ರೂಗಳಷ್ಟು ನಿಧಿಗಳಿವೆ. 1023 ಲಕ್ಷ ರೂ.ಗಳ ದುಡಿಯುವ ಬಂಡವಾಳವಿದೆ 942 ಲಕ್ಷ ರೂ.ಗಳ ಸಾಲವನ್ನು ನೀಡಲಾಗಿದೆ ಎಂದು ತಿಳಿಸುತ್ತಪ್ರಸಕ್ತ ಸಾಲಿನಲ್ಲಿ 69.57 ಲಕ್ಷ ರೂ.ಗಳ ಲಾಭ ಗಳಿಸಲಾಗಿದೆ ಸದಸ್ಯರಿಗೆ 15% ಡಿವಿಡೆಂಡ ನೀಡಲಾಗಿದೆ ಎಂದು ತಿಳಿಸಿದರು. ಸಹಕಾರಿಯಲ್ಲಿ ಸ್ವಹಿತಕ್ಕಿಂತ ಸಮಾಜದ ಹಿತವೇ ಮುಖ್ಯ ಆರ್ಥಿಕ ಶುದ್ಧತೆಯಿಂದ ಸಾಮೂಹಿಕ ನಿರ್ಣಯಗಳನ್ನು ತೆಗೆದುಕೊಂಡು ಸ್ಪರ್ದೆಯ ಬದಲಿಗೆ ಸಾಮರಸ್ಯದಿಂದ ಕಾರ್ಯ ನಿರ್ವಹಿಸಲಾಗುತ್ತಿದೆ. ಇದೆ ಹಿನ್ನೆಲೆಯಲ್ಲಿ ಪ್ರತಿ ವರ್ಷ ಕುಟುಂಬ ಮಿಲನ್ ಕಾರ್ಯಕ್ರಮವನ್ನು ಸಹ ಹಮ್ಮಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಸಂವಾದ ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್. ಸತೀಶ ಚಂದ್ರರವರು ಉದ್ಘಾಟನೆ ನೆರವೇರಿಸಿ **ಸಹಕಾರ ಕ್ಷೇತ್ರದ ಸವಾಲುಗಳು, ಪರಿಹಾರಗಳು ಹಾಗೂ ಅವಕಾಶಗಳು** ಈ ಬಗ್ಗೆ ಮಯೂರ ಸೌಹಾರ್ದದವರು ಹಮ್ಮಿಕೊಡಿರುವ ಈ ಕಾರ್ಯಕ್ರಮವು ಸಮಯೋಚಿತವಾಗಿದೆ.ಜ್ಞಾನದ ಕ್ರಾಂತಿಯ ಕಾಲ (knowledge Revolution Period),ಇದಾಗಿದ್ದರಿಂದ ಎಲ್ಲ ಸವಾಲುಗಳನ್ನು ಅವಕಾಶ ಗಳನ್ನಾಗಿ ಪರಿವತಿಸಿದಲ್ಲಿ ಪರಿಹಾರ ತಾನೇ ತಾನಾಗಿ ಬರುತ್ತದೆ ಸದಸ್ಯರ ಸಕ್ರೀಯ ಭಾಗವಹಿಸುವಿಕೆಗಿಂತ ಇನ್ನಾವ ಪರಿಹಾರವೂ ಬೇಕಿಲ್ಲ ಎಂದು ತಿಳಿಸುತ್ತ ಸಹಕಾರ ಕ್ಷೇತ್ರವೊಂದು ಕಾಮಧೇನುವಿದ್ದಂತೆ. ನಾವೂ ಎಷ್ಟು ಉಪಯೋಗ ಪಡಿಸಿಕೊಳ್ಳಲು ಸಾಧ್ಯವಿದೆಯೊ ಅಷ್ಟು ನಮಗೆ ಉಪಯೋಗವಾಗುತ್ತದೆ ಹೆಚ್ಚು ಲಾಭ ಸಿಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಶಿವಮೊಗ್ಗ ಜಿಲ್ಲಾ ನಿರ್ದೇಶಕ ಶ್ರೀ ರವಿ ಕುಮಾರ ರವರು ಅನೇಕ ಸೌಹಾರ್ದ ಸಹಕಾರಿಗಳ ಹಾಗೂ ಸಹಕಾರಿ ಸಂಸ್ಥೆಗಳ ಅಧ್ಯಕ್ಷರು ನಿರ್ದೇಶಕರು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಉಪಸ್ಥಿತರಿದ್ದರು.

ಸುವಿಧಾ ಸಹಕಾರಿಯ ಅಧ್ಯಕ್ಷ ಹಾಗೂ ಚಾರ್ಟರ್ಡ ಅಕೌಂಟೆಂಟ್ ಶ್ರೀ ರವೀಂದ್ರ ನಾಥರವರು ನಡೆಸಿಕೊಟ್ಟರು. ಸಂವಾದ ಕಾರ್ಯ ಕ್ರಮದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರರವರು ಹಾಗೂ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನ ಕಾರ್ಯದರ್ಶಿ ಶ್ರೀ ಬಿ.ಎ.ಮಹದೇವಪ್ಪನವರು ಭಾಗವಹಿಸಿದ್ದರು.

ಸಹಕಾರಿಗಳ ಅನೇಕ ಪ್ರಶ್ನೆಗಳಿಗೆ ಹಾಗೂ ಸಂವಾದ ಕಾರ್ಯಕ್ರಮ ನಿರ್ವಾಹಕ ಶ್ರೀ ರವೀಂದ್ರನಾಥರವರು ಕೇಳಿದ ಪ್ರಶ್ನೆಗಳಿಗೆ ಶ್ರೀ ಎಸ್.ಆರ್.ಸತೀಶಚಂದ್ರರವರು ಹಾಗೂ ಶ್ರೀ ಬಿ.ಎ.ಮಹದೇವಪ್ಪನವರು ಉತ್ತರನೀಡಿದರು. ಕಾರ್ಯಕ್ರಮ ಅತ್ಯುತ್ತಮವಾಗಿತ್ತೆಂದು ವಿನೂತನ ವಾಗಿತ್ತೆಂದು ಸಹಕಾರಿಗಳು ಅಭಿಪ್ರಾಯ ವ್ಯಕ್ತ ಪಡಿಸಿದರು.

# ವಿದೇಶಿ ಬಂಡವಾಳ – ಸಹಕಾರಿ ಸ್ವಾಮ್ಯತೆ ಅಬಾಧಿತ

ಎಚ್. ಶಿವಕುಮಾರ್
ಚಾರ್ಟರ್ಡ್ ಅಕೌಂಟೆಂಟ್



ನಮ್ಮ ದೇಶದಲ್ಲಿ ವ್ಯಾಪಾರ ವಹಿವಾಟುಗಳನ್ನು ಆರಂಭಿಸುವಾಗ ಕೆಲವು ನಿರ್ದಿಷ್ಟ ರೀತಿಯ ರೂಪುರೇಶೆಗಳನ್ನು ಅನುಸರಿಸಬೇಕಾಗುತ್ತದೆ. ಒಬ್ಬ ವ್ಯಕ್ತಿಯು ತನ್ನ ಸ್ವಂತಕ್ಕೆ ವ್ಯಾಪಾರದಲ್ಲಿ ತೊಡಗುವಾಗ ಸರಳ ರೀತಿಯಲ್ಲಿ ಏಕಸ್ವಾಮ್ಯ ಮಾಲೀಕತ್ವದ ವ್ಯಾಪಾರಿ ಸಂಸ್ಥೆಯನ್ನು ಆರಂಭಿಸಬಹುದು. ಹಾಗೆಯೇ ಇಬ್ಬರು ಮತ್ತು ಹೆಚ್ಚಿನ ಸಂಖ್ಯೆಯ ಹೂಡಿಕೆದಾರರು ಜಂಟಿಯಾಗಿ ವ್ಯಾಪಾರವನ್ನು ಆರಂಭಿಸುವಾಗ ಪಾಲುದಾರಿಕೆ ಸಂಸ್ಥೆಯನ್ನು ಹುಟ್ಟುಹಾಕಬೇಕಾಗುತ್ತದೆ. ಇನ್ನೂ ಮುಂದುವರೆದು ಸುಸಜ್ಜಿತ ರೀತಿಯಲ್ಲಿ ವ್ಯಾಪಾರಿ ಸಂಸ್ಥೆಯನ್ನು ಕಂಪನಿಗಳ ಮಾದರಿಯಲ್ಲಿ ನಡೆಸುವುದಾದರೆ ಕಂಪನಿಗಳನ್ನು ನೋಂದಣಿ ಮಾಡಿಸಿ, ವ್ಯಾಪಾರಿ ಸಂಸ್ಥೆಗಳನ್ನು ಸಂಘಟಿಸಬಹುದಾಗಿದೆ. ಇದಲ್ಲದೆ ಸಹಕಾರ ಸಂಘಗಳು, ಟ್ರಸ್ಟುಗಳು, ಸರ್ಕಾರೇತರ ಸಂಘಸಂಸ್ಥೆಗಳ ಮೂಲಕವೂ ವ್ಯಾಪಾರ ವಹಿವಾಟುಗಳ್ನು ಅನ್ವಯವಾಗುವ ಆಯಾಯ ಕಾಯ್ದೆಗಳ ವ್ಯಾಪ್ತಿಗೆ ಒಳಪಟ್ಟು ನಡೆಸಬಹುದು.

ಭಾರತೀಯ ಸಂಪ್ರದಾಯ ಮತ್ತು ಸಿದ್ದ ಕಾನೂನುಗಳ ರೂಪರೇಶೆ ಹೀಗಿರುವಾಗ ವಿದೇಶಿ ನೇರ ಬಂಡವಾಳವನ್ನು ಯಾವ ಮಾರ್ಗದಲ್ಲಿ ಒಳತರಲು ಅವಕಾಶವಿದೆ ಎಂಬ ಪ್ರಶ್ನೆಗೆ ಉತ್ತರಿಸಲು ಮೇಲಿನ ಹಿನ್ನೆಲೆಯನ್ನು ಅವಲೋಕಿಸಬೇಕಾಯಿತು. ವಿದೇಶಿ ಬಂಡವಾಳದ ವಿಚಾರ ಬಂದಾಗ ಯಾವುದೇ ಅನಿವಾಸಿ ಭಾರತೀಯನು ಅಥವಾ ಭಾರತೀಯ ಸಂಜಾತ ವ್ಯಕ್ತಿಯು ನಮ್ಮ ದೇಶದಲ್ಲಿ ಏಕಸ್ವಾಮ್ಯ ಮಾಲೀಕತ್ವದ ವ್ಯಾಪಾರಿ ಸಂಸ್ಥೆಯನ್ನು ಆರಂಭಿಸಬಹುದು ಅಥವಾ ಆತನು ಯಾವುದೇ ಭಾರತೀಯ ವ್ಯಾಪಾರಿ ಸಂಸ್ಥೆಯಲ್ಲಿ ಪಾಲುದಾರನಾಗಿ ಹಣ ಹೂಡಬಹುದು.

ಆದರೆ ಹಾಗೆ ವಿದೇಶಿ ಬಂಡವಾಳವನ್ನು ಹೊಂದಿದಂತಹ ಸಂಸ್ಥೆಯು ಕೃಷಿ, ಭೂ ವ್ಯವಹಾರ, ಅಥವಾ ಪತ್ರಿಕಾ ಪ್ರಸಾರದಂತಹ ವ್ಯವಹಾರಗಳಲ್ಲಿ ತೊಡಗಿರಬಾರದು. ಹೀಗೆ ಭಾರತದಲ್ಲಿ ಹೂಡಿದ ಹಣವನ್ನು ಬೇಕೆಂದಾಗ ವಾಪಸ್ ತೆಗೆದುಕೊಂಡು ಹೋಗಲು ರಿಸರ್ವ್ ಬ್ಯಾಂಕಿನ ಅನುಮತಿ ಬೇಕಾಗುತ್ತದೆ.

ಹಾಗೆಯೇ ಪಾಕಿಸ್ತಾನವನ್ನು ಹೊರತುಪಡಿಸಿ ಯಾವುದೇ ದೇಶದ ವಿದೇಶಿಯರು ಭಾರತದಲ್ಲಿ ಏಕಸ್ವಾಮ್ಯ ಮಾಲೀಕತ್ವದ ಸಂಸ್ಥೆ ಆರಂಭಿಸಲು ಅಥವಾ ಪಾಲುದಾರರಾಗಿ ಹಣ ಹೂಡಲು ಭಾರತದ ರಿಸರ್ವ್ ಬ್ಯಾಂಕು ಮತ್ತು ಕೇಂದ್ರ ಸರ್ಕಾರಗಳ ಪರವಾನಿಗೆ ಪಡೆಯಬೇಕಾಗುತ್ತದೆ. ಅನಿವಾಸಿ ಭಾರತೀಯರು ಅಥವಾ ವಿದೇಶಿಯರು ವಿದೇಶಿ ಬಂಡವಾಳವನ್ನು ಭಾರತಕ್ಕೆ ತರುವಾಗ ನಗದು ರೂಪದಲ್ಲಿ ಒಳತರಲು ಅವಕಾಶವಿಲ್ಲ. ಬ್ಯಾಂಕುಗಳ ಮೂಲಕ ಹಣ ವರ್ಗಾವಣೆ ಮಾಡಿ ಕ್ರಮಬದ್ಧವಾಗಿ ವಿದೇಶಿ ಬಂಡವಾಳವನ್ನು ಭಾರತದಲ್ಲಿ ತೊಡಗಿಸಬಹುದಾಗಿದೆ.



ಭಾರತದಲ್ಲಿ ನೋಂದಣಿಯಾದ ಕಂಪನಿಗಳು ಅವು ಪ್ರೈವೇಟ್ ಲಿಮಿಟೆಡ್ ಅಥವಾ ಲಿಮಿಟೆಡ್ ಕಂಪನಿಗಳೇ ಇರಲಿ, ವಿದೇಶಿ ಬಂಡವಾಳವನ್ನು ಹೊಂದಲು ಅವಕಾಶವಿದೆ. ಇಂತಹ ಕಂಪನಿಗಳ ಶೇರುಗಳನ್ನು ವಿದೇಶಿ ಬಂಡವಾಳವನ್ನು ಬಳಸಿ ಖರೀದಿಸಲು ಅನಿವಾಸಿ ಭಾರತೀಯರಿಗೆ, ವಿದೇಶಿಯರಿಗೆ ಹಾಗೂ ವಿದೇಶಿ ಕಂಪನಿಗಳಿಗೆ ಸಾಧ್ಯವಾಗುವ ಪ್ರಕ್ರಿಯೆ ನಡೆದು ಬಂದಿದೆ. ವಿದೇಶಿ ನೇರ ಬಂಡವಾಳದ ಒಳಹರಿವಿನಲ್ಲಿ ಈ ಮಾರ್ಗ ಅತ್ಯಂತ ಪ್ರಚಲಿತವಾದುದು.

ಏಕಸ್ವಾಮ್ಯ ಮಾಲೀಕತ್ವ, ಪಾಲುದಾರಿಕೆ ಹೂಡಿಕೆ ಮತ್ತು ಕಂಪನಿಗಳ ಶೇರು ಖರೀದಿಸುವುದು ಇವುಗಳನ್ನು ಬಿಟ್ಟು ವಿದೇಶಿ ನೇರ ಬಂಡವಾಳವನ್ನು ಬೇರೆ ಯಾವ ರೀತಿಯಲ್ಲೂ ನಮ್ಮ ದೇಶದೊಳಕ್ಕೆ ತರಲು ಸಾಧ್ಯವಿಲ್ಲ. ಹಾಗಾಗಿ ಸಹಕಾರಿ ಸಂಘಗಳು, ಟ್ರಸ್ಟುಗಳು, ಸರ್ಕಾರೇತರ ಸಂಸ್ಥೆಗಳಲ್ಲಿ ವಿದೇಶಿ ಬಂಡವಾಳವನ್ನು ತೊಡಗಿಸಲು ಸಾಧ್ಯವಿಲ್ಲ. ಅದರಲ್ಲೂ ವಿಶೇಷವಾಗಿ ಸಹಕಾರಿ ಸಂಘಗಳು ತಮ್ಮ ಶೇರು ಬಂಡವಾಳವನ್ನು ವಿದೇಶಿ ನೇರ ಬಂಡವಾಳದ ಹಣಕ್ಕೆ ಪ್ರತಿಯಾಗಿ ಹಂಚಲು ಸಾಧ್ಯವಿಲ್ಲ.

ಸಹಕಾರಿ ಸಂಘಗಳ ಶೇರು ಬಂಡವಾಳಕ್ಕೆ ಅನಿವಾಸಿ ಭಾರತೀಯರು ಮತ್ತು ವಿದೇಶಿಯರು ಅರ್ಜಿದಾರರಾಗಲು ಅವಕಾಶವಿಲ್ಲ. ಸಹಕಾರಿ ರಂಗ ಭಾರತೀಯ ಪ್ರಜೆಗಳಿಗೆ ಮಾತ್ರ ಮುಕ್ತವಾದದ್ದು. ಹಾಗೆಂದ ಮಾತ್ರಕ್ಕೆ ಸಹಕಾರಿ ಸಂಘಗಳು ವಿದೇಶಿ ಕಂಪನಿಗಳೊಂದಿಗೆ ವ್ಯವಹರಿಸಬಾರದು ಎಂದು ಅರ್ಥವಲ್ಲ. ಸಹಕಾರಿ ಸಂಘಗಳು ತಮ್ಮ ವ್ಯವಹಾರದ ಅವಶ್ಯಕತೆಯನ್ನು ಆಧಾರಿಸಿ ಆಮದು ರಫ್ತು ಮೂಲಕ ವಿದೇಶಿ ಕಂಪನಿಗಳೊಂದಿಗೆ ಕಾನೂನುಬದ್ಧವಾಗಿ ವ್ಯವಹರಿಸಬಹುದು.

ಸಹಕಾರಿ ರಂಗದ ಸಾರ್ವಭೌಮತ್ವದ ಪ್ರಶ್ನೆ ಬಂದಾಗ ಸಹಕಾರಿ ಶೇರು ಧನವು ಮೂಲ ಭಾರತೀಯರದ್ದು ಮಾತ್ರ. ಹಾಗಾಗಿ ಕೇಂದ್ರ ಸರ್ಕಾರ ಯಾವುದೇ ಕ್ಷೇತ್ರದಲ್ಲಿ ವಿದೇಶಿ ನೇರ ಬಂಡವಾಳವನ್ನು ಸ್ವಾಗತಿಸಿ ಮುಕ್ತಗೊಳಿಸಿದರೂ ಸಹಕಾರಿ ರಂಗದ ಸ್ವಾಮ್ಯದ ವಿಚಾರದಲ್ಲಿ ಸಹಕಾರಿ ರಂಗ ಅಬಾಧಿತ.

ನಮ್ಮ ದೇಶದ ಸಹಕಾರಿ ರಂಗವನ್ನು ವಿದೇಶಿಯರು ನೇರವಾಗಿ ಹಣ ಹೂಡಿಕೊಂಡು ಆಕ್ರಮಿಸಿಕೊಳ್ಳುವ ಅಪಾಯವಿಲ್ಲ. ಆದರೆ ವಿದೇಶಿ ನೇರ ಬಂಡವಾಳ ನಮ್ಮ ದೇಶದಲ್ಲಿ ಹೆಚ್ಚು ಹೆಚ್ಚು ಹರಡಿದಂತೆಲ್ಲಾ ಉದಾಹರಣೆಗೆ ಚಿಲ್ಲರೆ ವ್ಯಾಪಾರ, ಸಹಕಾರಿ ರಂಗವು ಕಾರ್ಪೊರೇಟ್ ವಲಯದೊಂದಿಗೆ ಸ್ಪರ್ಧೆಗೆ ಇಳಿಯಬೇಕಾದ ಅನಿವಾರ್ಯತೆ ಎದುರಾಗುತ್ತದೆ. ಅಂತಹದೊಂದು ಸ್ಪರ್ಧೆಗೆ ಎದೆಯೊಡ್ಡಲು ಮತ್ತು ಸ್ಪರ್ಧಾತ್ಮಕ ಸನ್ನಿವೇಶದಲ್ಲಿ ತನ್ನ ಮೂಲವನ್ನು ಉಳಿಸಿಕೊಳ್ಳಲು ಸಹಕಾರಿ ರಂಗ ಸಮರ್ಥವಾಗಿ ಸನ್ನದ್ಧವಾಗಬೇಕಾಗುತ್ತದೆ. ■

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.

ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010
www.souharda.coop, Ph: 080-23378375-80, Email:souharda@souharda.coop

**ಪತ್ರ ಸಂಖ್ಯೆ:ಸಂ/ ಮಾರ್ಗದರ್ಶಿ/ 2012–13** **ದಿನಾಂಕ : 10.12.2012**

## ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಗಮನಕ್ಕೆ

ಮಾನ್ಯರೇ,

ಭಾರತೀಯ ರಿಸರ್ವ್ ಬ್ಯಾಂಕ್ ದಿನಾಂಕ 02 ನವೆಂಬರ್ 2012 ರಂದು ಸಂಯುಕ್ತ ಸಹಕಾರಿಗೆ ಪತ್ರವನ್ನು ಬರೆದು ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ, 1949 ಕಲಂ 22ರನ್ವಯ ಬ್ಯಾಂಕಿಂಗ್ ಪರವಾನಗಿ ಪಡೆದುಕೊಂಡಿರದ (ಃಚಿಟಿಇಟಿಣ ಐಛಿಜಟಿಜ) ಕೆಲವು ಸೌಹಾರ್ದ ಸಹಕಾರಿಗಳು ಸದಸ್ಯೇತರರಿಂದ ಠೇವಣಿ ಸ್ವೀಕರಿಸುತ್ತಿರುವುದು ಕಂಡುಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ಈ ಕುರಿತು ಸದಸ್ಯ ಸಹಕಾರಿಗಳಿಗೆ ಸೂಕ್ತ ಮಾರ್ಗದರ್ಶಿಕೆಯನ್ನು (ಉಣುಜಟುಟಿಛ) ನೀಡುವಂತೆ ಸೂಚಿಸಿರುತ್ತಾರೆ.

ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮವು ಕೇಂದ್ರ ಅಧಿನಿಯಮವಾಗಿದ್ದು ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ, ನಿಯಮಗಳಲ್ಲಿ ಮತ್ತು ಸಹಕಾರಿಯ ಉಪವಿಧಿಗಳಲ್ಲಿ ಏನೇ ಇದ್ದರೂ ಸಹ ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ, 1949ರಲ್ಲಿ ಹೇಳಿರುವುದು ಅಂತಿಮವಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ ಕಲಂ 22ರನ್ವಯ ಬ್ಯಾಂಕಿಂಗ್ ಪರವಾನಗಿ (ಃಚಿಟಿಇಟಿಣ ಐಛಿಜಟಿಜ) ಹೊಂದಿರದ ಯಾವುದೇ ಸಹಕಾರಿಯು ಸದಸ್ಯೇತರರಿಂದ ಠೇವಣಿಯನ್ನು ಸ್ವೀಕರಿಸತಕ್ಕದ್ದಲ್ಲ ಎಂಬುದನ್ನು ಈ ಮೂಲಕ ಸೂಚಿಸಿದೆ. ಈ ಸೂಚನೆಯನ್ನು ಉಲ್ಲಂಘಿಸುವ ಸಹಕಾರಿಯು ಭಾರತೀಯ ರಿಸರ್ವ್ ಬ್ಯಾಂಕ್ ವಿಧಿಸುವ ದಂಡವನ್ನು ಪಾವತಿಸಬೇಕಾಗುತ್ತದೆ ಮತ್ತು ಶಿಕ್ಷೆಗೆ ಒಳಪಡಬೇಕಾಗುತ್ತದೆ.

ರಾಜ್ಯದ ಸೌಹಾರ್ದ ಸಹಕಾರಿಗಳ ಹಿತದೃಷ್ಟಿಯಿಂದ ಈ ಸೂಚನೆಯನ್ನು ಎಲ್ಲಾ ಸಹಕಾರಿಗಳಿಗೆ ನೀಡಲಾಗಿರುತ್ತದೆ.

ಸಹಿ/–
**(ಶರಣಗೌಡ ಜಿ ಪಾಟೀಲ)**
ವ್ಯವಸ್ಥಾಪಕ ನಿರ್ದೇಶಕ

## ಸೌಹಾರ್ದ ಸಹಕಾರಿಗಳಿಗೆ ಶ್ರೀ ಮಂಜುನಾಥನ ಆಶೀರ್ವಾದ – ಡಾ. ವೀರೇಂದ್ರ ಹೆಗ್ಗಡೆ

ರಾಷ್ಟ್ರದ ಏಳಿಗೆಯಲ್ಲಿ ಸಹಕಾರ ಕ್ಷೇತ್ರ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿದೆ. ಈ ದೇಶದ ಉತ್ತಮ ಆರ್ಥಿಕ ಸಂಘಟನೆಗಳಾಗಿ ಸಹಕಾರಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಈ ಕ್ಷೇತ್ರ ಇನ್ನೂ ಹೆಚ್ಚು ಸದೃಢವಾಗಿ, ಬಲಶಾಲಿಯಾಗಿ ಕಾರ್ಯನಿರ್ವಹಿಸಬೇಕಾದರೆ ಸಹಕಾರಿಗಳ ಸಿಬ್ಬಂದಿ ವರ್ಗದವರಲ್ಲಿ ನಿಷ್ಠೆ, ದಕ್ಷತೆ ಹಾಗೂ ಪ್ರಾಮಾಣಿಕತೆಯನ್ನು ರೂಡಿಸಿಕೊಳ್ಳುವುದು ಅಗತ್ಯ. ಅದರಿಂದ ಸಹಕಾರ ಕ್ಷೇತ್ರದ ಅಭಿವೃದ್ಧಿ ಸಾಧ್ಯ ಎಂದು ಧರ್ಮಸ್ಥಳದ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಡೆಯವರು ಧರ್ಮಸ್ಥಳಕ್ಕೆ ಭೇಟಿ ನೀಡಿದ ಸೌಹಾರ್ದ ಸಹಕಾರಿಗಳ 8ನೇ ತಂಡದ ಶಿಬಿರಾರ್ಥಿಗಳಿಗೆ ತಿಳಿಸಿದರು.

ಶ್ರೀಯುತರು ಮುಂದುವರೆದು ಸೌಹಾರ್ದ ಸಹಕಾರಿ ಕ್ಷೇತ್ರ ಇತ್ತೀಚಿನ ದಿನಗಳಲ್ಲಿ ಪ್ರಾರಂಭವಾಗಿದೆ. ಸ್ವಾಯತ್ತತೆ, ಸ್ವಯಂ ಆಡಳಿತ, ಸ್ವಯಂ ನಿಯಂತ್ರಣ ಇದರ ಉದ್ದೇಶ. ಈ ಕಾಯ್ದೆಯಡಿ ಕಾರ್ಯ ನಿರ್ವಹಿಸುತ್ತಿರುವ ಸಹಕಾರಿ ಸಂಸ್ಥೆಗಳು ಉತ್ತಮವಾಗಿ ಸೇವೆ ಸಲ್ಲಿಸುತ್ತಿವೆ. ಇದೊಂದು ಉತ್ತಮ ಬೆಳವಣಿಗೆ. ಇದನ್ನು ಮುಂದುವರೆಸಿ ಎಂದು ತಿಳಿಸಿ ಸೌಹಾರ್ದ ಕ್ಷೇತ್ರದ ಅಭಿವೃದ್ಧಿಗೆ ಧರ್ಮಸ್ಥಳ ಶ್ರೀ ಮಂಜುನಾಥಸ್ವಾಮಿಯ ಆಶೀರ್ವಾದ ನಿರಂತರವಾಗಿದೆ ಎಂದು ಅನುಗ್ರಹಿಸಿದರು.



ಸ್ವಾಭಿಮಾನಿ ಸಹಕಾರಿ

Swabhimani Sahakari, Monthly, Posted at GPO-MBC Bengaluru Post Office 560001,
Posting Day 12th. Registered No. RNP/BGS/2094/2011-13
RNI No. KARBIL - 2004/18001
Pages 20



## ವ್ಯಕ್ತಿ ಪರಿಚಯ



## ಸಹಕಾರಿ ಸೇವೆಗೆ ಸದಾ ಸಿದ್ಧವಿರುವ ನಗುಮೊಗದ

## ಸಿದ್ರಾಮಪ್ಪ ಪಾಟೀಲ

ತೋಗರಿ ಕಣಜ ಗುಲಬರ್ಗಾ ಜಿಲ್ಲೆಯಲ್ಲಿ ಸುರೇಶ ಪಾಟೀಲ ಇವರ ಕುಟುಂಬದಲ್ಲಿ ಶ್ರೀ ಸಿದ್ರಾಮಪ್ಪ ಪಾಟೀಲ ಇವರು 1970 ಜುಲೈ 06 ರಂದು ಜನಿಸಿದರು. ಮೂಲತಃ ಕೃಷಿ ಕುಟುಂಬದವರು. ಚಿಕ್ಕಂದಿನಿಂದಲೇ ಕ್ರೀಡೆಗಳಲ್ಲಿ ಆಸಕ್ತಿ ಹೊಂದಿದವರು. ಕಾಲೇಜು ದಿನಗಳಲ್ಲಿ ಖೋಖೋ ದಲ್ಲಿ ಹೆಚ್ಚಿನ ಆಸಕ್ತಿ ಹೊಂದಿದವರು ಜೊತೆಗೆ ಎನ್.ಎಸ್.ಎಸ್ ನಲ್ಲಿ ಅತ್ಯುತ್ತಮ ವಿದ್ಯಾರ್ಥಿಯಾಗಿದ್ದವರು. ನಂತರ ಬಿ.ಎಸ್ಸಿ, ಎಲ್‌ಎಲ್.ಬಿ(ಸ್ಪೇ) ಪದವಿ ಮುಗಿಸಿ ವಕೀಲ ವೃತ್ತಿಯನ್ನು ಆಯ್ಕೆ ಮಾಡಿಕೊಂಡು ತಮ್ಮ ಜೀವನವನ್ನು ಪ್ರಾರಂಭಿಸಿದರು.

**ವ್ಯವಹಾರ ಕ್ಷೇತ್ರ :** ಕಳೆದ 2006 ರಿಂದ ಇವತ್ತಿನವರೆಗೂ ಶ್ರೀ ಸಿದ್ಧಿವಿನಾಯಕ ಸೌಹಾರ್ದ ಸಹಕಾರಿ ನಿ., ಗುಲಬರ್ಗಾ ಇದರ ಉಪಾಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

**ಸಾಮಾಜಿಕ ಮತ್ತು ಸಹಕಾರ ಕ್ಷೇತ್ರ :** ಕಳೆದ 6 ವರ್ಷಗಳಿಂದ ಸಿದ್ಧಿವಿನಾಯಕ ಸೌಹಾರ್ದ ಸಹಕಾರಿಯಲ್ಲಿ ಉಪಾಧ್ಯಕ್ಷರಾಗಿ ಕಾರ್ಯನಿರ್ವ ಹಿಸುತ್ತಿರುವದರಿಂದ ಇವರು ಸಹಕಾರಿ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಹೆಚ್ಚಿನ ಅನುಭವವನ್ನು ಪಡೆದವರಾಗಿರುತ್ತಾರೆ. ಕಡುಬಡವರ ಏಳಿಗೆಗಾಗಿ ಸಹಕಾರಿ ಕ್ಷೇತ್ರವು ತನ್ನದೆ ಆದ ಒಂದು ಕೊಡುಗೆ ನೀಡುತ್ತಿದೆ ಎಂಬುದು ಇವರ ಅಭಿಪ್ರಾಯ. ಅಲ್ಲದೆ ಭಾರತ ಸರ್ಕಾರ ಸಹಕಾರ ಸಂಘಗಳ ಬಗ್ಗೆ ಸಂವಿಧಾನ ತಿದ್ದುಪಡಿ (97ನೇ ತಿದ್ದುಪಡಿ 2011) ಈ ತಿದ್ದುಪಡಿಯಿಂದ ಜಾತಿ ಮತ್ತು ಲಿಂಗ ಭೇದ ಮಾಡಿದಂತಾಗುತ್ತದೆ. ಒಂದು ಸಹಕಾರಿ ಬೆಳವಣಿಗೆ ಯಾಗಬೇಕಾದರೆ ಅಲ್ಲಿ ರಾಜಕೀಯ ಮತ್ತು ಜಾತಿ ಇವುಗಳು ಪ್ರವೇಶಿಸ ಕೂಡದು ಅಂದರೆ ಸಹಕಾರಿ ಏಳಿಗೆ ಉತ್ತಮ ದಿಸೆಯಲ್ಲಿರುತ್ತದೆ. ಇಂದು ದೇಶ ಅಭಿವೃದ್ಧಿಯತ್ತ ಮುಖಮಾಡಿದೆಯಂದರೆ ಸಹಕಾರಿ ಕ್ಷೇತ್ರದ ಅಳಿಲು ಸೇವೆಯು ಒಂದು ಕಾರಣ ಎಂದು ಅಭಿಪ್ರಾಯ ಪಡುತ್ತಾರೆ. ಸೌಹಾರ್ದ ಸಹಕಾರಿ ಗಳ ಬೆಳವಣಿಗೆಗೆ ಯಾವುದೇ ರೀತಿಯ ಅಡತಡೆಗಳು ಇರದೇ ಬೆಳೆಯುತ್ತಲೇ ಇರಬೇಕು ಎಂಬುದು ಇವರ ಆಶಯ ಇದರ ಜೊತೆಗೆ ಸಹಕಾರದಿಂದಲೇ ದೇಶದ ಬೆಳವಣಿಗೆ ಸಾಧ್ಯ ಎನ್ನುತ್ತಾರೆ.

**ಸೇವಾ ಕ್ಷೇತ್ರ :** ಎಲ್ಲರೂ ಒಂದಲ್ಲ ಒಂದು ಕ್ಷೇತ್ರದಲ್ಲಿ ಸೇವೆಯನ್ನು ಸಲ್ಲಿಸುತ್ತಾರೆ. ಯಾರಾದರೂ ಹೊಸದಾಗಿ ಸೌಹಾರ್ದ ಸಹಕಾರಿಯನ್ನು ಹುಟ್ಟು ಹಾಕಲು ಮಾರ್ಗದರ್ಶನ ಕೇಳಲು ಹತ್ತಿರ ಬಂದರೆ ಇವರು ಆ ಸೌಹಾರ್ದದ ಪ್ರಾರಂಭದಿಂದ ಸೌಹಾರ್ದ ನೋಂದಣಿಯಾಗಿ ಕಾರ್ಯಾರಂಭದವರೆಗೂ ಅವರ ಜೊತೆಯಿದ್ದು ಅವರಿಗೆ ಮಾರ್ಗದರ್ಶನ ನೀಡುತ್ತಾರೆ.

– **ಸಂಜಯ ಕೋರಟಕರ.**

**Leader of Leaders - KarnataKa state souharda federaL Co-op-Ltd BangaLore**

**ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಸಹಕಾರಿಯ ಸಂಪರ್ಕ ದೂರವಾಣಿಗಳು**

| | | |
|---|---|---|
| ಅಧ್ಯಕ್ಷ | ಶ್ರೀ ಎಸ್. ಆರ್. ಸತೀಶಚಂದ್ರ | 9448696108 |
| ಉಪಾಧ್ಯಕ್ಷ | ಶ್ರೀ ಗುರುನಾಥ ಜ್ಯಾಂತೀಕರ | 9448270104 |
| ವ್ಯವಸ್ಥಾಪಕ ನಿರ್ದೇಶಕ | ಶ್ರೀ ಶರಣಗೌಡ ಜಿ. ಪಾಟೀಲ | 9740401685 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ನಾರಾಯಣ ಹೆಗಡೆ | 9480579882 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ವೈ. ಕುಮಾರ | 9845893455 |
| ತರಬೇತಿ ಅಧಿಕಾರಿ | ಶ್ರೀ ವಿ.ಜಿ. ಕಾರಕೂನ | 9482734077 |
| ಕಾನೂನು ವಿಭಾಗದ ಅಧಿಕಾರಿ | ಶ್ರೀ ಶ್ರೀಕಾಂತ | 9916814888 |
| ಬೆಂಗಳೂರು ವಿಭಾಗಾಧಿಕಾರಿ | ಶ್ರೀ ರಘುನಂದನ್ ಕೆ. | 9481036592 |
| ಬೆಳಗಾವಿ ವಿಭಾಗಾಧಿಕಾರಿ | ಶ್ರೀ ಜಿ.ಎಸ್. ತೋಪಣ್ಣನವರ್ | 9916367887 |
| ಗುಲ್ಬರ್ಗಾ ವಿಭಾಗಾಧಿಕಾರಿ | ಶ್ರೀ ಸಂಜಯ ಕೋರಟಕರ | 9900990268 |
| ಮೈಸೂರು ವಿಭಾಗಾಧಿಕಾರಿ | ಶ್ರೀ ಶಿವಕುಮಾರ ಬಿರಾದಾರ | 9844454995 |

ಇವರಿಂದ ಪ್ರಕಟಿತ :

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
ನಿರ್ಮಾಣ ಭವನ ಆವರಣ, ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್ ರಾಜಾಜಿನಗರ. ಬೆಂಗಳೂರು – 10.
web : www.souharda.coop,
E-mail : souharada@souharada.coop,
**ದೂ.ಸಂ :** 23378375/76/77/78/79/80 & 23474408, 23573291
ಸಂಪಾದಕ, ಪ್ರಕಾಶಕ : **ಶರಣಗೌಡ ಜಿ. ಪಾಟೀಲ**
ಸಂಚಿಕೆ ಸಿದ್ಧತೆ : **ವಿ.ಜಿ.ಕಾರಕೂನ**
ಮುದ್ರಣ : **ವರ್ಣ ಕಮ್ಯುನಿಕೇಷನ್ಸ್**, ಬೆಂಗಳೂರು.

**ಬೆಳಗಾವಿ ವಿಭಾಗೀಯ ಕಛೇರಿ ವಿಳಾಸ :** ನಂ. 436, ಹುಯಿಲುಗೋಳ ಕಾಂಪ್ಲೆಕ್ಸ್, ಶೆರಿಗಲ್ಲಿ, ಬೆಳಗಾವಿ – 1, ದೂ. 0831–2401551
**ಗುಲ್ಬರ್ಗಾ ವಿಭಾಗೀಯ ಕಛೇರಿಯ ವಿಳಾಸ :** ನಂ. ಡಿ–02, 1ನೇ ಮಹಡಿ, ಶ್ರೀ ಗಜಾನನ ಫ್ಲಾವರ್ ವ್ಯಾಲಿ, ಗುಡ್–ಲಕ್ ಹೋಟೆಲ್ ಎದುರು, ಖೂಬಾ ಪ್ಲಾಟ್, ಗುಲಬರ್ಗಾ– 585103. ದೂ;08472–270222, ಮೊ : 9900990268